# ಜಾಹಿರುದ್ದಿನ್ ಮಹಮ್ಮದ್ ಅಕ್ಬರ

1. ಪೀಠಿಕೆ.
2. ಪ್ರಾರಂಭಿಕ ಜೀವನ
3. ಸಿಂಹಾಸನರೋಹಣ.
4. ಆರಂಬಿಕ ಸಮಸ್ಯೆಗಳು
5. ಪರದಾ ಆಡಳಿತ
6. ಸೈನಿಕ ಸಾಧನೆಗಳು.
7. ಆಡಳಿತ ಪದ್ದತಿ
8. ಕಂದಾಯ ಪದ್ದತಿ
9. ಮನ್‌ಸಬ್‌ದಾರಿ ಪದ್ದತಿ
10. ಧಾರ್ಮಿಕ ನೀತಿ
11. ರಜಪೂತ ನೀತಿ
12. ಕೊನೆಯ ದಿನಗಳು – ಮರಣ.
13. ವ್ಯಕ್ತೀತ್ವ – ವಿಮರ್ಶೆ

**ಪೀಠಿಕೆ.**

ಮಧ್ಯಕಾಲಿನ ಭಾರತದ ಇತಿಹಾಸದಲ್ಲಿಯೇ ಅತ್ಯಂತ ಪ್ರಸಿದ್ಧ ದೊರೆ. ಭಾರತದ ಇತಿಹಾಸದಲ್ಲಿ ಆಳಿದ ಶ್ರೇಷ್ಟ ಅರಸರಲ್ಲಿ ಮಹಾಪುರುಷ (ದಿ ಗ್ರೇಟ್) ಎಂದು ಕರೆಯಿಸಿಕೊಂಡಿದ್ದಾನೆ. ಹಿಂದು-ಮುಸ್ಲಿಮ್‌ರ ಸಾಮರಸ್ಯಕ್ಕಾಗಿ ಮತ್ತು ಅವರ ಪ್ರಗತಿಗಾಗಿ ಶ್ರಮಿಸಿದ ಮೊಟ್ಟ ಮೊದಲ ರಾಷ್ಟ್ರೀಯ ಅರಸನಾಗಿದ್ದಾನೆ. ಮೊಘಲ್ ಸಾಮ್ರಾಜ್ಯನ್ನು ವಿಸ್ತರಿಸಿ, ಅದಕ್ಕೆ ದಕ್ಷ ಆಡಳಿತ ನೀಡಿ ಸಾಮ್ರಾಜ್ಯದ ನಿಜ ಸ್ಥಾಪಕ ಎನಿಸಿಕೊಂಡಿದ್ದಾನೆ. ಅಕ್ಬರನು ಮಾಡಿದ ದಂಡಯಾತ್ರೆಗಳು, ಸಾಮ್ರಾಜ್ಯದ ಸರ್ವತೋಮುಖ ಅಭಿವೃದ್ಧಿಗಾಗಿ ಮಾಡಿದ ಸುಧಾರಣೆಗಳು, ಸಂಗೀತ, ಸಾಹಿತ್ಯ, ಕಲೆ-ವಾಸ್ತುಶಿಲ್ಪಕ್ಕೆ ನೀಡಿದ ಪ್ರೊತ್ಸಾಹ, ಹಿಂದು-ಮುಸ್ಲೀಮ್‌ರ ಏಕತೆಗಾಗಿ ಮತ್ತು ಅವರ ಸಾಮರಸ್ಯ ಜೀವನಕ್ಕಾಗಿ ಮಾಡಿದ ಪ್ರಯತ್ನಗಳು ಅವನನ್ನು ಜಾತ್ಯತೀತ ಅರಸ, ಸುಧಾರಕ, ವೀರಯೊಧ, ದಕ್ಷ ಆಡಳಿತಗಾರ, ಪ್ರಜಾಹಿರಕ್ಷಕ ಎಂದು ಗೌರವದಿಂದ ಕಾಣುವಂತೆ ಮಾಡಿವೆ. ಅಕ್ಬರ್ ಎಂದು ಜನರು ಪ್ರೀತಿಯಿಂದ ನೀಡಿದ ಬಿರುದಾಗಿದೆ. "ಅಕ್ಬರ್" ಎಂದರೆ "ಸರ್ವಶ್ರೇಷ್ಠ" ಎಂದರ್ಥವಾಗುತ್ತದೆ

**ಪ್ರಾರಂಬಿಕ ಜೀವನ.**

ಅಕ್ಬರ್‌ನ ಪೂರ್ವ ನಾಮ 'ಜಲಾಲುದ್ದೀನ್ ಮಹಮ್ಮದ್'. ಇವನು ಹುಮಾಯೂನ್ ಮತ್ತು ಹಮೀದಾಬಾನು ಬೇಗಮ್‌ಳ ಉದರದಲ್ಲಿ ಕ್ರಿ.ಶ. 1542 ಅಕ್ಟೋಬರ್ 15 ರಂದು ಸಿಂಧ್ ಪ್ರಾಂತದ ಅಮಕೋಟೆಯಲ್ಲಿ ವೀರಸಾಲನ ಆಶ್ರಯದಲ್ಲಿ ಜನಿಸಿದನು. ಈ ಸಮಯದಲ್ಲಿ ಹುಮಾಯೂನ್ ಸಾಮ್ರಾಜ್ಯವನ್ನು ಕಳೆದುಕೊಂಡು ನಿರ್ಗತಿಕನಾಗಿ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಅಲೆದಾಡುತ್ತಿದ್ದನು. ಸಿಂಧ್ ದ ದಂಡಯಾತ್ರೆಯ ರಣಭೂಮಿಯಲ್ಲಿರುವಾಗ ಮಗನ ಜನನದ ವಿಷಯ ತಿಳಿದು ತನ್ನಲ್ಲಿರುವ ಕಸ್ತೂರಿಯನ್ನೆ ತನ್ನ ಸರದಾರರಲ್ಲಿ ಹಂಚಿ "ಕಸ್ತೂರಿಯ ಪರಿಪಳದಂತೆ ನನ್ನ ಮಗನ ಕೀರ್ತಿಯು ಹರಡಲಿ ಎಂದು ಹಾರೈಸಿದನು.

ಅಕ್ಬರನ ಬಾಲ್ಯ ಜೀವನ ಸುಖಮಯವಾಗಿರಲಿಲ್ಲ. ಅಕ್ಬರ ಒಂದು ವರ್ಷದ ಮಗುವಾಗಿದ್ದಾಗ 'ಮಹಮ್ ಅನಗಾ' ಎಂಬ ದಾದಿಗೆ ಒಪ್ಪಿಸಿ ಹುಮಾಯೂನ್ ಮತ್ತು ಅವನ ಹೆಂಡತಿ ಪರ್ಶಿಯಾಕ್ಕೆ ಬೈರಮ್‌ಖಾನನ ಜೋತೆ ಸಹಾಯ ಪಡೆಯಲು ಹೋದರು. (ಮಹಮ್

ಅನಗಾ, ಚೌಸಾ ಕದನದಲ್ಲಿ ಹುಮಾಯೂನ್ ಸೋತು ಪ್ರಾಣ ರಕ್ಷಣೆಗಾಗಿ ಗಂಗಾನದಿಯಲ್ಲಿ ಹಾರಿದಾಗ ಅವನನ್ನು ರಕ್ಷಸಿ ಆಗ್ರಾಕ್ಕೆ ಕರೆತಂದ 'ನಿಜಾಮ ' ಎಂಬ ನಾವಿಕ ಹೆಂಡತಿಯಾಗಿದ್ದಳು). ಹೀಗಾಗಿ ಅಕ್ಬರನ ಬಾಲ್ಯವು ತಂದೆ-ತಾಯಿಯ ಮಮತೆಯಲ್ಲಿ ಬೆಳೆಯಲಿಲ್ಲ. ಸಾಕುತಾಯಿಯಾದ ಮಹಮ್ ಅನಗಾಳ ಆರೈಕೆಯಲ್ಲಿ ಬೆಳೆದನು.

ಹುಮಾಯೂನ್ ಪರ್ಶಿಯಾಕ್ಕೆ ಹೋಗಿ ಅಲ್ಲಿಯ ಪರ್ಶಿಯಾದ ಚಕ್ರವರ್ತಿ ಷಹಾ ತಮಾಷ ಜೋತೆ ಮೈತ್ರಿ ಮಾಡಿಕೊಂಡು ಸಹಾಯ ಕೋರಿದನು. ಕೆಲವು ಷರತ್ತುಗಳೊಂದಿಗೆ ಸಹಾಯ ಮಾಡಲು ಒಪ್ಪಂದ ಮಾಡಿಕೊಂಡನು. ಅವನ ಸಹಾಯದಿಂದ ತನಗೆ ಕಿರುಕುಳ ನೀಡಿದ ತನ್ನ ಸಹೋದರರಾದ ಕಾಮ್ರನ್, ಅಸ್ಕರಿ ಮತ್ತು ಹಿಂಡಾಲರನ್ನು ಸೋಲಿಸಿ ಕಂದಹಾರ ಕಾಬೂಲ್ ಪ್ರಾಂತಗಳನ್ನು ಗೆದ್ದಕೊಂಡನು. ಆಗ ತನ್ನ ಮಗ ಅಕ್ಬರನನ್ನು ಕರೆಯಿಸಿಕೊಂಡು ಅವನ ಶಿಕ್ಷಣದ ಬಗ್ಗೆ ವ್ಯವಸ್ಥೆ ಮಾಡಿದನು. ಅಕ್ಬರನ ವಿದ್ಯಾಬ್ಯಾಸಕ್ಕಾಗಿ ಅನೇಕ ಉಸ್ತಾದರನ್ನು ನೇಮಕಮಾಡಿದನು. ಆದರೆ ಅಕ್ಬರನಿಗೆ ಅಕ್ಷರಾಬ್ಯಾಸದಕಡೆ ಆಸಕ್ತಿ ಇರಲಿಲ್ಲ. ಅವನ ಒಲವು ಹೆಚ್ಚಾಗಿ ಕುದುರೆ ಸವಾರಿ ಮಾಡುವದರಲ್ಲಿ, ಕತ್ತಿ ವರಸೆಯಲ್ಲಿ ಮತ್ತು ಬೇಟೆಯಾಡುವದರಲ್ಲಿತ್ತು. ಇವನು ಅತ್ಯಂತ ಅಗಾಧವಾದ ಸ್ಮರಣಶಕ್ತಿಯನ್ನು ಹೊಂದಿದ್ದನು. ಇವನು ಬಹು ಬೇಗನೆ ಯುದ್ಧ ನೀತಿ, ರಾಜನೀತಿ, ಆಡಳಿತ ಜ್ಞಾನ ಮತ್ತು ಸೈನಿಕ ಸಂಘಟನೆ ಕಲೆಯನ್ನು ಅರಗಿಸಿಕೊಂಡನು.

ಕ್ರಿ.ಶ.1551 ರಲ್ಲಿ ಅಕ್ಬರನು 9 ವರ್ಷದವನಿದ್ದಾಗ ಅವನನ್ನು ಘಜನಿಯ ಪ್ರಾಂತಾಧಿಕಾರಿಯಾಗಿ ನೇಮಕ ಮಾಡಲಾಯಿತು. ಮತ್ತು ತನ್ನ ದಾಯಾದಿ ಹಿಂಡಾಲ್‌ನ ಮಗಳಾದ 'ರುಖಿಯಾ ಬೇಗಮ್‌ಳನ್ನು ಇವನ ಜೊತೆ ಮದುವೆ ಮಾಡಿದನು. ಹಿಂಡಾಲ್‌ನ ಸರದಾರರ ಪ್ರೀತಿ ವಿಶ್ವಾಸ ಗಳಿಸಲು ಮತ್ತು ಭಾರತದ ಮೇಲೆ ದಾಳಿ ಮಾಡಲು ಈ ಸಂಬಂಧವನ್ನು ಮಾಡಿದನು.

ಕ್ರಿ.ಶ. 1555 ರಲ್ಲಿ ಹುಮಾಯುನ್‌ನು ಸೂರ್ ಸಾಮ್ರಾಜ್ಯದ ಸಿಕಂದರ್ ಸೂರನನ್ನು ಸೋಲಿಸಿ, ಲಾಹೋರ ಮತ್ತು ಸಿಂಧ್ ಪ್ರಾಂತಗಳನ್ನು ವಶ ಪಡಿಸಿಕೊಂಡನು. ಮತ್ತು ಈ ಪ್ರಾಂತಕ್ಕೆ ಅಕ್ಬರ್‌ನನ್ನು ಆಡಳಿತಾಧಿಕಾರಿ ಮತ್ತು ತನ್ನ ಮುಂದಿನ ಉತ್ತರಾಧಿಕಾರಿ ಎಂದು ನೇಮಿಸಿದನು. ಬೈರಾಮ್ ಖಾನ್ ಮತ್ತು ಮುನಿಮ್‌ಖಾನ್‌ರನ್ನು ಮಾರ್ಗದರ್ಶಕರು ಮತ್ತು ರಕ್ಷಕರಾಗಿ ನಿಯೋಜಿಸಿದನು. ಭೈರಾಮಖಾನ್‌ನಿಂದ ರಾಜನೀತಿ ಚತುರತೆಯನ್ನು ಮತ್ತು ರಣತಂತ್ರಗಳನ್ನು ಕಲಿತು ಅಕ್ಬರ ಮಹಾನ ಯೋಧನಾಗಿ ಬೆಳೆದನು.

**ಸಿಂಹಾಸನರೋಹಣ.**

ಹುಮಾಯೂನನು ಕ್ರಿ.ಶ. 1556 ಜನೇವರಿ 27 ರಂದು ಮರಣ ಹೊಂದಿದಾಗ ಅಕ್ಬರನು ಪಂಜಾಬದ ಕರನೌರನ ಯುದ್ಧ ಶಿಬಿರದಲ್ಲಿದ್ದನು. ಬೈರಮ್ ಖಾನ ಹುಮಾಯುನ್‌ನ ಮರಣದ ವಾರ್ತೆಯನ್ನು ರಹಸ್ಯವಾಗಿಟ್ಟು ಅಕ್ಬರ್‌ನನ್ನು ಹಿಂದೂಸ್ಥಾನದ ಚಕ್ರವರ್ತಿಎಂದು ಘೋಷಿಸಿದನು. ಮುಂದೆಅಕ್ಬರನು ತನ್ನ ತಂದೆ ಹುಮಾಯೂನನ ಕ್ರಿಯಾಕರ್ಮಗಳನ್ನು ಮುಗಿಸಿ 1556 ಫೆಬ್ರವರಿ 14 ರಂದು ಮೊಘಲ್ ಸಾಮ್ರಾಜ್ಯದ ಸಿಂಹಾಸನ ರೋಹಣ ಮಾಡಿದನು.

ಆರಂಬಿಕ ಸಮಸ್ಯೆಗಳು.

ಅಕ್ಬರನು 1556 ರಲ್ಲಿ ಮೊಘಲ್ ಸಿಂಹಾಸನ ಅಲಂಕರಿಸಿದ ಮೇಲೆ ಅನೇಕ ಆಂತರಿಕ ಮತ್ತು ಬಾಹ್ಯ ಸಮಸ್ಯೆಗಳನ್ನು ಎದುರಿಸಬೇಕಾಯಿತು. ಸಿಂಹಾಸನವು ಸುಖದ ಸೂಪ್ಪತ್ತಿಗೆ ಯಾಗಿರದೇ ಮುಳ್ಳಿನ ಹಂದರವಾಗಿತ್ತು. ಅಕ್ಬರನ ಮುಂದಿರುವ ಸಮಸ್ಯೆಗಳು ಈ ಕೆಳಗಿನಂತಿದ್ದವು

1. ದಾಯದಿ ಸಂಬಂಧಿಕರ ವಿರೋಧ.
2. ಅವಿಧೇಯ ಸರದಾರರ ದಂಗೆಗಳು.

3. ಬರಿದಾದ ಖಜಾನೆ.
4. ದೆಹಲಿ ಮತ್ತಯ ಆಗ್ರಾಗಳನ್ನು ವಶಪಡಿಸಿಕೊಳ್ಳುವದು.
5. ಅಫಘಾನ್ ನಾಯಕರ ದಾಳಿಯ ಭಯ.
6. ಪ್ರಭಲ ರಜಪೂತರನ್ನು ಎದುರಿಸುವದು.
7. ಗೆದ್ದ ಪ್ರದೇಶಗಳಲ್ಲಿ ಆಡಳಿತ ರೂಪಿಸುವದು.

**ದಾಯದಿ ಸಂಬಂಧಿಕರ ವಿರೋಧ.**

ಅಕ್ಬರನ ಸಂಬಂದಿಕರಾದ ಮಹಮ್ಮದ್ ಹಕೀಮ್ ಮಿರ್ಜಾ, ತರದೀಖಾನಬೇಗ್, ಸುಲೇಮಾನ ಮಿರ್ಜಾ ಇನ್ನೂ ಕೆಲವರು ಅಕ್ಬರ ಸಿಂಹಾಸನ ಪಡೆದದ್ದು ಇವರಿಗೆ ಇಷ್ಟವಿಲಿಲ್ಲ. ಅವರು ಆಂತರಿಕ ಕುತಂತ್ರಗಳನ್ನು ಮಾಡುತ್ತಿರುವ ಭಯ

**ಅವಿಧೇಯ ಸರದಾರರ ದಂಗೆಗಳು.**

ತಂದೆ ಹುಮಾಯೂನ್‌ನ ಜೋತೆ ಪರ್ಶೀಯಾದಿಂದ ಬಂದ ಸೈನಿಕ ಸರದಾರರು ಸ್ವಧೇಶಕ್ಕೆ ಹೋಗುವ ಹವಣಿಕೆಯಲ್ಲಿ ಮುಂದಿನ ಯುದ್ಧಗಳಲ್ಲಿ ಭಾಗವಹಿಸದಿರಲು ದಂಗೆ ಏಳುತ್ತಿರುವ ಸುದ್ಧಿಗಳು.

**ಬರಿದಾದ ಖಜಾನೆ.**

ಅನೇಕ ಶತತ ಯುದ್ಧಗಳಿಂದ ಮತ್ತು ದಾಯಾದಿಗಳ ದುರಾಶೆಗಳಿಂದ ಖಜಾನೆ ಬರಿದಾಗಿತ್ತು.

**ದೆಹಲಿ ಮತ್ತಯ ಆಗ್ರಾಗಳನ್ನು ವಶಪಡಿಸಿಕೊಳ್ಳುವದು.**

ಹುಮಾಯೂನ್ ಭಾರತವನ್ನು ಗೆದ್ದಿದ್ದರು ದೆಹಲಿ ಮತ್ತು ಆಗ್ರಗಳನ್ನು ಸಂಪೂರ್ಣವಾಗಿ ವಶಪಡಿಸಿಕೊಂಡಿರಲಿಲ್ಲ. ಅಕಸ್ಮಾತಗಿ ಮರಣ ಹೊಂದಿದ್ದರಿಂದ ವೈರಿ ಪಡೆಗಳು ಪ್ರಭಲರಾಗಿದ್ದರು

**ಅಫಘಾನ್ ನಾಯಕರ ದಾಳಿಯ ಭಯ.**

ಸಿಕಂದರ್ ಸೂರ್ ಹುಮಾಯುನ್‌ನಿಂದ ಸೋತಿದ್ದರು. ಸಂಪೂರ್ಣವಾಗಿ ಸೊರಗಿರಲಿಲ್ಲ. ಇವನ್ನು ಮತ್ತೆ ಆಕ್ರಮಣ ಮಾಡಲು ಸೈನ್ಯ ಸಂಘಟಿಸುತ್ತಿದ್ದನು. ಮತ್ತು ಆದಿಲ್ ಷಾ ಸೂರು, ಇಬ್ರಾಹಿಮ್ ಷಾ ಸೂರರು ಅಕ್ಬರನ ದಾಳಿ ಎದುರಿಸಲು ಸರ್ವ ಸಿದ್ದನಾಗಿದ್ದರು.

ಹೇಮು ಪ್ರಭಲನಾಗಿದ್ದು.

ಅಕ್ಬರನ ವೈರಿಗಳಲ್ಲಿ ಹೇಮು ಅತ್ಯಂತ ಬಲಿಷ್ಠನಾಗಿದ್ದನು. ಆದಿಲ್‌ಷಾ ಸೂರ್‌ನ ಪ್ರಧಾನಿ ಮಂತ್ರಿಯಾಗಿದ್ದು, ಸುಲ್ತಾನನ್ನು ಮೂಲೆಗುಂಪು ಮಾಡಿ ಅಧಿಕಾರವನ್ನೆಲ್ಲಾ ತನ್ನ ಕೈಗೆ ತಗೆದುಕೊಂಡು ರಾಜಾ ವಿಕ್ರಮಾದಿತ್ಯ" ಎಂಬ ಬಿರುದು ದೆಹಲಿಯ ಸಿಂಹಾಸನವನ್ನೇರಿದನು. ಮದ್ಯಕಾಲಿನ ಇತಿಹಾಸದಲ್ಲಿ ದೆಹಲಿಯಲ್ಲಿ ಹಿಂದೂ ಸಾಮ್ರಾಜ್ಯವನ್ನು ಮತ್ತೊಮ್ಮೆ ಸ್ಥಾಪಿಸಿದ ಮೊದಲ ಮತ್ತು ಕೊನೆಯ ದೊರೆ.

**ಪ್ರಭಲ ರಜಪೂತರನ್ನು ಎದುರಿಸುವದು.**

ಗುಜರಾತ, ಮಾಳವ, ರಾಜಸ್ಥಾನ, ಬಿಕನೇರಿ, ಗೊಂಡಾವನ, ಜೈಸಲ್‌ಮೇರ್ ಮತ್ತು ಮೇವಾಡಗಳಲ್ಲಿ ರಜಪೂತರು ಅತ್ಯಂತ ಪ್ರಭಲರು, ಸ್ವಾಭಿಮಾನಿಗಳು ಮತ್ತು ಸ್ವಾತಂತ್ರ್ಯ ಪ್ರೀಯರಾಗಿದ್ದರು.

ಗೆದ್ದ ಪ್ರದೇಶಗಳಲ್ಲಿ ಆಡಳಿತ ರೂಪಿಸುವದು. ಈಗಾಗಲೇ ಹುಮಾಯೂನ ಅನೇಕ ಪ್ರದೇಶಗಳನ್ನು ಗೆದ್ದುಕೊಂಡಿದ್ದನು ಈ ಪ್ರದೇಶಗಳಲ್ಲಿ ನಾಗರೀಕ ಆಡಳಿತವನ್ನು ರೂಪಿಸುವದು ಇನ್ನೊಂದು ಸಮಸ್ಯೆಯಾಗಿತ್ತು.

## ಎರಡನೆಯ ಪಾಣಿಪತ್ ಕಾಳಗ 1556 ನವಂಬರ್ 5

ಭಾರತದ ಮಹತ್ವದ ಮತ್ತು ನಿರ್ಣಾಯಕ ಯುದ್ಧಗಳಲ್ಲಿ ಎರಡನೆಯ ಪಾಣಿಪತ್ ಕಾಳಗವು ಒಂದಾಗಿದೆ. ಹುಮಾಯೂನ್ ಹಿಂದೂಸ್ಥಾನ ಗೆದ್ದು ಕೊಂಡರೂ ಅದರ ಮೇಲೆ ಇನ್ನು ಪ್ರಭುತ್ವ ಸ್ಥಾಪಿಸಿರಲಿಲ್ಲ. ಇಷ್ಟರಲ್ಲೇ ಹುಮಾಯೂನ್ ಅಕಸ್ಮಾತಾಗಿ ಮರಣ ಹೊಂದಿದನು. ಇದರಿಂದ ಸೂರ್ ಮನೆತನದ ಆದಿಲ್ ಷಾ ಸೂರನ ಮಂತ್ರಿಯಾಗಿದ್ದ ಹೇಮು ಮೊಘಲ್ ರಾಜ್ಯಪಾಲರಾದ ಇಸ್ಕಂದರಖಾನ ಮತ್ತು ತರ್ದಿಬೇಗ್‌ರನ್ನು ಸೋಲಿಸಿ ಹೊಡೆದೋಡಿಸಿ, ಆಗ್ರಾ ಮತ್ತು ದೆಹಲಿಗಳನ್ನು ವಶಪಡಿಸಿಕೊಂಡನು. ನಂತರ ಹೇಮು ದೆಹಲಿಯಲ್ಲಿ "ಮಹಾರಾಜ ವಿಕ್ರಮಾದಿತ್ಯ" ಎಂಬ ಬಿರುದಿನೊಂದಿಗೆ ಸಿಂಹಾಸವನ್ನೇರಿದನು. "ಮದ್ಯಕಾಲಿನ ಭಾರತದ ಇತಿಹಾಸದಲ್ಲಿ ದೆಹಲಿ ಸಿಂಹಾಸವನ್ನೇರಿದ ಏಕೈಕ ಹಿಂದೂ ದೊರೆ" ಎಂಬ ಕೀರ್ತಿಗೆ ಪಾತ್ರನಾದನು. ಹೇಮು ಅನೇಕ ಅಫಘನ್ನರಿಗೆ ಹಣ ಮತ್ತು ಅಧಿಕಾರದ ಆಮಿಷ ತೋರಿಸಿ ತನ್ನ ಪ್ರಭಾವ ಹೆಚ್ಚಿಸಿಕೊಂಡನು.

ಅಕ್ಬರನು ಈ ಸಮಯದಲ್ಲಿ 14 ವರ್ಷದ ಬಾಲಕನಾಗಿದ್ದು ಬಲಿಷ್ಠ ವೈರಿಯನ್ನು ಎದುರಿಸಬೇಕಿತ್ತು. ಕೆಲ ಮೊಘಲ್ ಸರದಾರರು ಅಕ್ಬರನಿಗೆ ಕಾಬೂಲಿಗೆ ಹಿಂದಿರುಗಲು ಸಲಹೆ ಮಾಡಿದರು. ಆದರೆ ಅಕ್ಬರನ ಮಾರ್ಗದರ್ಶಕ ಮತ್ತು ರಾಜಕೀಯ ಗುರು 'ಇದೇ ಸೂಕ್ತ ಸಮಯ ನಾವು "ಜಿಹಾದ್" ಹೆಸರಿನಲ್ಲಿ ಯುದ್ಧ ಮುಂದುವರಿಸದ್ದೆಯಾದರೆ ಗೆಲವು ಖಚಿತ' ಎಂದು ಸಲಹೆ ನೀಡಿದನು. ಅಕ್ಬರನು ದೃತಿಗೆಡದೆ ಬೈರಮ್‌ಖಾನನ ಸಲಹೆಯಂತೆ ಯುದ್ಧ ಸಿದ್ದತೆಗಳನ್ನು ಮಾಡಿಕೊಂಡು ಸುಸಜ್ಜಿತ ಸೈನ್ಯದೊಂದಿಗೆ ಹೇಮುವನ್ನು ಎದುರಿಸಲು ಹೊರಟು ಪಾಣಿಪತ್ ಪ್ರದೇಶದಲ್ಲಿ ಬಿಡಾರ ಬಿಟ್ಟನು. ಇತ್ತ ಹೇಮು ತನ್ನ ಬಲಾಢ್ಯ ಸೈನ್ಯದೊಂದಿಗೆ ಮೊಘಲ್‌ರನ್ನು ಎದುರಿಸಲು ಹೋರಟನು. ಹೇಮುವಿನ ಸೈನ್ಯದಲ್ಲಿ ಅಫಘನ್‌ರ ಮುಸ್ಲೀಮ್ ಸೈನ್ಯ ಮತ್ತು ರಜಪೂತ ಸೈನ್ಯ ಒಳಗೊಂಡಿತ್ತು.

**ಯುದ್ಧದ ಗತಿ**

ಹೇಮುವಿನ ಸೈನ್ಯ ಮತ್ತು ಅಕ್ಬರನ ಸೈನ್ಯ ಪಾಣಿಪತ್ ರಣಭೂಮಿಯಲ್ಲಿ ಎದುರಾದವು. 1556 ನವಂಬರ 5 ರಂದು ಯುದ್ಧ ಪ್ರಾರಂಭವಾಯಿತು. ಹೇಮುವಿನ ಎಡಭಾಗದ ಸೈನ್ಯದ ನೇತೃತ್ವವನ್ನು ಅಫಘಾನ ಮುಸ್ಲೀಮ್ ದಂಡನಾಯಕ ಶಹಾದಿಖಾನ್, ಬಲಭಾವನ್ನು ರಾಮಯ್ಯ ಎಂಬ ಹಿಂದೂ ದಂಡನಾಯಕನು ವಹಿಸಿಕೊಂಡಿದ್ದರು. ಮಧ್ಯದಲ್ಲಿ ಹೇಮು ಆನೆಯ ಅಂಬಾರಿಯಲ್ಲಿ ಕುಳಿತು ತನ್ನ ಸೈನ್ಯವನ್ನು ನಿರ್ದೇಶಿಸುತ್ತಿದ್ದನು. ಪ್ರಾರಂಭದಲ್ಲಿ ಹೇಮುವಿನ ಸೈನ್ಯದ ಮೇಲೆ ಅತ್ಯಂತ ಪ್ರಭಲ ದಾಳಿ ಮಾಡಿ ಅಪಾರ ನಷ್ಟವನ್ನುಂಟು ಮಾಡಿ ಮೊಘಲ್‌ರ ಸೈನೀಕರನ್ನು ದಂಗುಬಡಿಸಿದನು. ಅಕ್ಬರನ ದಂಡನಾಯಕ ಬೈರಮ್‌ಖಾನ ದೃತಿಗೆಡದೆ "ಅಕ್ಬರನ ಈ ಯುದ್ಧವು ಅಪಾಯದಲ್ಲಿ ಇಸ್ಲಾಮ್ ಧರ್ಮದ ರಕ್ಷಣೆಗಾಗಿ ಮಾಡುತ್ತಿರುವ ಜಿಹಾದ್ (ಧರ್ಮ ಯುದ್ದ) ಯುದ್ಧ ವಾಗಿದೆ ಅದ್ದರಿಂದ ವೈರಿ ಪಡೆಯಲ್ಲಿರುವ ಮುಸ್ಲೀಮ್‌ರು ಇದಕ್ಕೆ ಬೆಂಬಲ ನೀಡಬೇಕೆಂದು ಘೋಷಿಸುತ್ತಿದ್ದನು." ಮತ್ತು ತನ್ನ ಪ್ರಭಲವಾದ ಬಿಲ್ಲು ಪಡೆಯನ್ನು ಮುಂದಕ್ಕೆ ತಂದು ಪ್ರಯೋಗಿಸಲಾರಂಭಿಸಿದನು. ಹೇಮು ಗೆಲವಿನ ದಾರಿಯಲ್ಲಿದ್ದಾಗ ವೈರಿಯ ಕಡೆಯಿಂದ ಬಂದ ಬಾಣವು ಅವನ ಕಣ್ಣಿಗೆ ಬಡಿದು ಪ್ರಜ್ಞಾಹೀನನಾಗಿ ಕುಸಿದು ಬಿದ್ದನು. ಹೇಮು ಸತ್ತನೆಂಬ ಸುಳ್ಳು ಸುದ್ದಿಯು ಹೇಗೂ ಹರಡಿತು. ಅದೇ ಸಮಯದಲ್ಲಿ ಹೇಮುವಿನ ಅನೇಕ ನಿಷ್ಠಾವಂತ ಮುಸ್ಲೀಮ್ ಸೈನೀಕರು ಜಿಹಾದ್ ಹೆಸರಿನ ಮೇಲೆ ವೈರಿ ಪಡೆಗೆ ಬೆಂಬಲಿಸಿದರು. ಇದರಿಂದ ಹೇಮುವಿನ ಸೈನ್ಯದಲ್ಲಿ ಕೋಲಾಹಲ ಉಂಟಾಯಿತು. ಸೈನೀಕರು ತಮ್ಮ ಪ್ರಾಣ ರಕ್ಷಣೆಗಾಗಿ ಪಲಾಯನ ಮಾಡಲು ಆರಂಭಿಸಿದರು. ಹೇಮುವಿನ ಮಾವುತನು ತನ್ನ ಸ್ವಾಮಿಯನ್ನು ಸುರಕ್ಷಿತ ಸ್ಥಳಕ್ಕೆ ಸಾಗಿಸುವಾಗ ಮೊಘಲ್ ಸೈನೀಕರು ಹೇಮುವನ್ನು ಬಂಧಿಸಿ ಅಕ್ಬರನಿಗೆ ಒಪ್ಪಸಿದರು. ಅಕ್ಬರನ ಪರವಾಗಿ ಭೈರಮ್‌ಖಾನ ಹೇಮುವಿನ ಶಿರಚ್ಛೇದ ಮಾಡಿ ಅಕ್ಬರನಿಗೆ ಘಾಜಿ ಎಂಬ ಬಿರುದು ನೀಡಿದನು.

**ಪರಿಣಾಮಗಳು.**

1.) ಈ ವಿಜಯದ ನಂತರ ಅಕ್ಬರನು ದೆಹಲಿ ಮತ್ತು ಆಗ್ರಾ ಗಳನ್ನು ವಶಪಡಿಸಿಕೊಂಡು ಹಿಂದೂಸ್ಥಾನದ ಚಕ್ರವರ್ತಿಯಾದನು.

2.) ಈ ಯುದ್ಧದ ಪರಿಣಾಮವಾಗಿ ಷೇರ್ ಷಹಾನು ಸ್ಥಾಪಿಸಿದ್ದ ಸೂರ್ ಸಾಮ್ರಾಜ್ಯ ಕೊನೆಗೊಂಡಿತು.

3.) ಅಕ್ಬರನು ಮೊಘಲ್ ಸಾಮ್ರಾಜ್ಯದ ಪುನಃರ್ ಸ್ಥಾಪಕ ಎಂಬ ಕೀರ್ತಿಗೆ ಪಾತ್ರನಾದನು.

4.) ಭಾರತದಲ್ಲಿ ಮೊಘಲ್ ಸಾಮ್ರಾಜ್ಯ ವಿಸ್ತರಿಸಲು ಈ ಯುದ್ಧ ಕಾರಣವಾಯಿತು.

5.) ಈ ಯುದ್ಧದ ಪರಿಣಾಮವಾಗಿ ಭಾರತದಲ್ಲಿ ರಾಜಕೀಯ ಏಕತೆ, ಆರ್ಥಿಕಾಭಿವೃದ್ಧಿ, ಸರ್ವಧರ್ಮಗಳ ಸಾಮರಸ್ಯ ಮತ್ತು ಸಂಸ್ಕೃತೀಕ ಬೆಳವಣಿಗೆಗೆ ಕಾರಣವಾಯಿತು.

**ಭೈರಮ್‌ಖಾನನ ಆಡಳಿತ ಕ್ರಿ. ಶ. 1556 ರಿಂದ 1560**

ಅಕ್ಬರ್ ಜೀವನದಲ್ಲಿ ಬೈರಮ್‌ಖಾನನ ಪ್ರಮುಖ ಪಾತ್ರ ವಹಿದ್ದಾನೆ. ಈತನು ಪರ್ಶಿಯಾದ ಮೂಲನಿವಾಸಿಯಾಗಿದ್ದು, ಇಸ್ಲಾಮ್ ಧರ್ಮದ ಶಿಯಾ ಪಂಥಕ್ಕೆ ಸೇರಿದವನಾಗಿದ್ದನು. ಹುಮಾಯೂನನ ಆತ್ಮೀಯ ಮಿತ್ರನು ಮತ್ತು ಪ್ರಮುಖ ದಂಡನಾಯಕನು ಆಗಿದ್ದನು. ಹುಮಾಯೂನನು ಶೇರ್ ಷಹಾನೊಂದಿಗೆ ಹೋರಾಡಿ ಸೋತಾಗ ಅವನ ಜೋತೆಯಲ್ಲಿಯೇ ಇದ್ದು ವೈರಿ ಪಡೆಗೆ ಸೆರೆಯಾಗಿದ್ದನು. ಹುಮಾಯೂನನು ತನ್ನ ಸಹೋದರಿಂದ ತಲೆ ತಪ್ಪಿಕೊಂಡು ಅಸಹಾಯಕನಾಗಿ ಅಲೆಯುತ್ತಿದ್ದಾಗ, ಅಕ್ಬರನ ಜನನದ ಸಮಯದಲ್ಲಿ ಮತ್ತೆ ತನ್ನ ಒಡೆಯನನ್ನು ಹುಡುಕಿಕೊಂಡು ಸೇರಿದನು. ತನ್ನ ಮಿತ್ರನಾದ ಪರ್ಶಿಯಾದ ಚಕ್ರವರ್ತಿ ಷಾಹಾನಿಂದ ಸೈನಿಕ ಮತ್ತು ಆರ್ಥಿಕ ಸಹಾಯ ಹುಮಾಯೂನನಿಗೆ ಕೊಡಿಸುವಲ್ಲಿ ಮತ್ತು ಕಂದಹಾರ ಮತ್ತು ಕಾಬೂಲ್‌ಗಳನ್ನು ವಶಪಡಿಸಿಕೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸಿದ್ದನು. ಮುಂದೆ ಅಕ್ಬರನ ರಾಜಕೀಯ ಶಿಕ್ಷಕ ಮತ್ತು ಸಂರಕ್ಷಕನಾಗಿ, ಹುಮಾಯನನ ಮರಣದ ನಂತರ ಅಕ್ಬರನನ್ನು ಮೊಘಲ್ ಚಕ್ರವರ್ತಿಯಾಗಿ ಘೋಷಿಸುವಲ್ಲಿ ಬೈರಮ್‌ಖಾನನ ಪಾತ್ರ ಮಹತ್ವದಾಗಿದೆ.

ಅಕ್ಬರನು ಇವನ ಅನುಭವ, ಚತುರತೆ, ಪರಾಕ್ರಮ, ಮತ್ತು ಸ್ವಾಮಿನಿಷ್ಟೆಯನ್ನು ಕಂಡು, ತನ್ನ ಪ್ರಧಾನಿ ಮಂತ್ರಿಯಾಗಿ ನೇಮಕ ಮಾಡಿ ಸಾಮ್ರಾಜ್ಯದ ಸಂಪೂರ್ಣ ಆಡಳಿತವನ್ನು ಒಪ್ಪಿಸಿದನು. ಕ್ರಿ. ಶ. 1556 ರಿಂದ 1560 ವರೆಗಿನ ಭೈರಮ್‌ಖಾನ ಆಡಳಿತ ಮತ್ತು ಸೇವೆ ಈ ಕೆಳಗಿಂತಿವೆ.

1. ಅಕ್ಬರನ ಪ್ರಭಲ ವೈರಿಗಳಾದ ಇಬಾಹಿಮ್ ಸೂರ್ ಮತ್ತು ಇತರ ಅಫಘನ್ ವೈರಿಗಳನ್ನು ಸದೆಬಡಿದನು.
2. ಗ್ವಾಲಿಯರ್ ಮತ್ತು ಜಾನಪುರಗಳನ್ನು ವಶಪಡಿಕೊಂಡನು.
3. ರಣಥಂಬೊರ ಮತ್ತು ಮಾಳವದ ಮೇಲೆ ದಾಳಿ ಮಾಡಿ ಅಪಾರ ಸಂಪತ್ತನ್ನು ತಂದನು.
4. ಸೈನ್ಯವನ್ನು ಪ್ರಭಲಗೊಳಿಸಿದನು.
5. ಅನೇಕ ಅಧಿಕಾರಿಗಳನ್ನು ನೇಮಿಸಿ ಆಡಳಿತನ್ನು ಚುರುಕು ಗೊಳಿಸಿದನು.

**ಪತನಕ್ಕೆ ಕಾರಣಗಳು**

1. ಬೈರಮ್‌ಖಾನ ಶಿಯಾ ಧರ್ಮದ ಕಟ್ಟಾ ಅನುಯಾಯಿಯಾಗಿದ್ದನು. ಪರ್ಶಿಯಾದ ಚಕ್ರವರ್ತಿಯ ಜೊತೆ ಹುಮಾಯೂನನು ಮಾಡಿಕೊಂಡ ಒಪ್ಪಂದ ದಂತೆ ಭಾರತದಲ್ಲಿ ಶಿಯಾಧರ್ಮ ಪ್ರಚಾರ ಮಾಡುತ್ತಿದ್ದದ್ದು ಸನ್ನಿ ಮುಸ್ಲೀಮ್‌ರಿಗೆ ಅಸಮದಾನ ಉಂಟಾಗಿ ಅವನ ವೈರಿಗಳಾದರು.
2. ಇವನ ತೀವ್ರತನದ ಬೆಳವಣಿಗೆಗಳು ಅಕ್ಬರನ ಹತ್ತಿರದ ಸಂಬಂಧಿಕರಿಗೆ ಮತ್ಸರವನ್ನುಂಟು ಮಾಡಿತ್ತು.
3. ಬೈರಮಖಾನನ ಸ್ವಾಬಾವಗಳಾದ ಅಹಂಕಾರ ಮತ್ತು ಪಕ್ಷಪಾತಗಳು ಇತರಿಗೆ ನೊವನ್ನುಂಟುಮಾಡಿದ್ದವು.
4. ಮಹಮ್ ಅನಗಾ ಮತ್ತು ಅವಳ ಮಗ ಅದಮ್‌ಖಾನ ತಮ್ಮ ಬೆಳವಣಿಗೆಗಾಗಿ ಬೈರಮ್‌ಖಾನನ ಬಗ್ಗೆ ಪಿತೂರಿ ಒಳಸಂಚು ಮಾಡಲಾರಂಭಿಸಿದರು.
5. ಅಕ್ಬರ್‌ನಿಗೆ ಬೈರಮ್‌ಖಾನನ ಬಗ್ಗೆ ಅನೇಕ ದೂರುಗಳು ಬರಲಾರಂಬಿಸಿದವು.

ಅಕ್ಬರನು 18 ವರ್ಷದವನಾಗಿದ್ದು ಆಡಳಿತದ ಆಧಿಕಾರವನ್ನೆಲ್ಲ ಕೈಗೆ ತಗೆದುಕೊಳ್ಳಲು ಬಯಸಿದ್ದನು. ಮತ್ತು ಸಾಕುತಾಯಿ ಮತ್ತು ಸಂಬಂಧಿಕರ ಕಿವಿಮಾತಿನ ಪ್ರಭಾವಕ್ಕೆ ಒಳಗಾಗಿ ಕ್ರಿ. ಶ 1560 ರಲ್ಲಿ ಭೈರಮ್ ಖಾನನಿಗೆ ಅಧಿಕಾರವನ್ನು ತ್ಯಾಜಿಸಿ ವಿಶ್ರಾಂತಿ ಪಡೆಯಲು ಮಕ್ಕಾಗೆ ಹೋಗಬೇಕೆಂದು ಸಂದೇಶ ಕಳುಹಿಸಿದನು. ಇದರಿಂದ ವಿಚಲಿತನಾದ ಬೈರಮ್‌ಖಾನ ಅಕ್ಬರನನ್ನು

ಪ್ರತ್ಯಕ್ಷವಾಗಿ ಭೇಟಿಯಾಗಲು ಪ್ರಯತ್ನಸಿ ವಿಫಲನಾದನು. ಇದರಿಂದ ಪಂಜಾಬದಲ್ಲಿ ಸಾಮ್ರಾಟನ ವಿರುದ್ಧ ದಂಗೆ ಪ್ರಾರಂಭಿಸಿದನು. ಅಕ್ಬರನು ಈ ದಂಗೆಯನ್ನು ದಮನಮಾಡಿ ಸೆರೆಯಾಗಿದ್ದ ಬೈರಮ್‌ಖಾನನನ್ನು ಬಿಡುಗಡೆ ಮಾಡಿ ಮಕ್ಕಾಗೆ ಹೊಗಲು ಸಲಹೆ ಮಾಡಿದನು. ಬಾದಷಹಾನ ಆಜ್ಞೆಯಂತೆ ಮಕ್ಕಾಗೆ ಹೋಗುವ ದಾರಿಯಲ್ಲಿ ವೈರಿಗಳಿಂದ ಹತನಾದನು.

**ಪರದಾ ಆಡಳಿತ. ಕ್ರಿ. ಶ. 1560 ರಿಂದ 1562**

ಭೈರಮ್‌ಖಾನನ ಪತನದ ನಂತರ ಅಕ್ಬರ್‌ನ ಮನಸ್ಸಿಗೆ ನೋವುಂಟಾಯಿತು. ಅದೇ ಕೊರಗಿನಲ್ಲಿ ಆಡಳಿತವನ್ನು ನಿರ್ಲಕ್ಷಿಸಿದನು. ಇದರಿಂದ ಅವನ ಸಾಕು ತಾಯಿ ಮಹಮ್‌ಅನಗಾ ಆಡಳಿತದ ಎಲ್ಲ ಸೂತ್ರಗಳನ್ನು ತನ್ನ ಕೈಗೆ ತಗೆದುಕೊಂಡಳು. ಸಾಮ್ರಾಜ್ಯದ ಆಡಳಿತವನ್ನು ಮಹಾರಾಣಿಯರ ವಾಸಸ್ಥಳದಿಂದಲೆ ಕ್ರಿ. ಶ. 1560 ರಿಂದ 1562 ರವರೆಗೆ ನಿರ್ವಹಿಸಿದಳು. ಅದ್ದರಿಂದ ಈ ಕಾಲಾವಧಿಯನ್ನು "ಪರದಾ ಆಡಳಿತ " ಎಂದು ಇತಿಹಾಸದಲ್ಲಿ ಪ್ರಸಿದ್ಧಿಯಾಗಿದೆ.

ಈ ಅವಧಿಯಲ್ಲಿ ಮಹಮ್ ಅನಗಾ ತನ್ನ ಮಗ ಅದಮ್‌ಖಾನನ ಮತ್ತು ಪೀರ್ ಮಹಮ್ಮದ್‌ನ ಅಧಿಕಾರವನ್ನು ಹೆಚ್ಚಿಸಿದಳು. ಆದರೆ ಅದಮ್‌ಖಾನನು ಸಾಮ್ರಾಜ್ಯದ ಕಂದಾಯದಿಂದ ಬಂದ ಸಂಪತ್ತನ್ನು ಸರಕಾರಕ್ಕೆ ಸಲ್ಲಸದೇ ತಾನೆ ಉಪಯೋಗಿಸಿಕೊಳ್ಳತ್ತಿದ್ದನು. ಅಷ್ಟೆಅಲ್ಲದೇ ಮಾಳವದ ದಂಡೆಯಾತ್ರೆಯಲ್ಲಿ ಲಭಿಸಿದ ಅಪಾರ ಸಂಪತ್ತನ್ನು ಸರಕಾರಿ ಖಜಾನೆ ಸಲ್ಲಿಸಿರಲಿಲ್ಲ. ಆರ್ಥಿಕ ಸಚಿವ ಸಮಷುದ್ದಿನ್ ಅಕ್ಬರನಿಗೆ ಪ್ರಸ್ತುತ ಪರಸ್ಥತಿಯನ್ನು ವಿವರಿಸಿದ್ದರಿಂದ ಅಕ್ಬರನು ಅದಮ್ ಖಾನನನ್ನು ಬಂಧಿಸಿ ಶಿಕ್ಷೆ ವಿಧಿಸಲು ಸಿದ್ಧನಾದನು. ಆದರೆ ಮಹಮ್ ಅನಗಾಳ ಮಧ್ಯಸ್ಥಿಕೆಯಿಂದ ಅವನನ್ನು ಕ್ಷಮಿಸಿದನು. ಮತ್ತು ಆರ್ಥಿಕ ಸಚಿವನಾಗಿದ್ದ ಸಮಷುದ್ದಿನ್ ಅಟಕಖಾನನನ್ನು ಪ್ರಧಾನ ಮಂತ್ರಿಯಾಗಿ ನೇಮಕ ಮಾಡಿದನು. ಮತ್ತು ಸಾಮ್ರಾಜ್ಯದ ಆಡಳಿತದಲ್ಲಿ ನಡೆದಿರು ವಂಚನೆಗಳನ್ನು ಮತ್ತು ಬ್ರಷ್ಟಚಾರಗಳನ್ನು ಪತ್ತೆ ಹಚ್ಚಲು ಆಜ್ಞಾಪಿಸಿದನು. ಇದರಿಂದ ಅದಮ್‌ಖಾನ ಮತ್ತು ಮಹಮ್ ಅನಗಾಳಿಗೆ ತೀವ್ರ ಅಸಮದಾನವಾಯಿತು. ಕ್ರಿ.ಶ. 1562 ರಲ್ಲಿ ಅದಮ್‌ಖಾನನು ತನ್ನ ಹಿಂಬಾಲಕರೊಡನೆ ಅರಮನೆಯನ್ನು ಹೊಕ್ಕು ಕೆಲಸದಲ್ಲಿ ನಿರತನಾಗಿದ್ದ ಸಮಷುದ್ದಿನ್ ಅಟಕಖಾನನನ್ನು ಕೊಂದು ಹಾಕಿದನು. ಅಕ್ಬರನನ್ನು ಕೊಲ್ಲಲು ಪ್ರಯತ್ನಿಸಿದನು. ಇದರಿಂದ ರೊಚ್ಚಿಗೆದ್ದ ಅಕ್ಬರನು ಅದಮ್‌ಖಾನನನ್ನು ಬಂಧಿಸಿ ಕೊಲೆ ಮಾಡಿಸಿದನು. ಅಕ್ಬರನು ಅಂತಃಪುರದ ಸ್ತ್ರೀಯರ ಕಾರಬಾರದಿಂದ ಮುಕ್ತಿ ಪಡೆದು ತಾನೆ ಸ್ವತಂತ್ರ ಆಡಳಿತವನ್ನು ನಿರ್ವಹಿಸತೊಡಗಿದನು.

**ಅಕ್ಬರನ ಸೈನಿಕ ಸಾಧನೆಗಳು.**

ಅಕ್ಬರನು ತನ್ನ ರಾಜಕೀಯ ಗುರು ಭೈರಮ್‌ಖಾನನ ಮಾತಿನಂತೆ " ರಾಜನಾದವನು ಯಾವಾಗಲೂ ದಂಡಯಾತ್ರೆ ಮಾಡುತ್ತಿರಬೇಕು ಇಲ್ಲವಾದರೆ ನೆರೆಹೊರೆರಾಜ್ಯದವರು ದಂಗೆ ಎಬ್ಬಿಸುವರು. ಸೈನ್ಯವನ್ನು ಯಾವಾಗಲು ಯುದ್ಧದಲ್ಲಿ ನಿರತವಾಗಿರುವಂತೆ ನೋಡಿಕೊಳ್ಳಬೇಕು ಇಲ್ಲವಾದರೆ ಸೈನಿಕರು ಮತ್ತು ದಂಡನಾಯಕರು ಸ್ವೇಚ್ಛಾಚಾರದಲ್ಲಿ ನಿರತರಾಗುವರು" ಎಂದು ನಿರತನಾದನು. ಅದಕ್ಕಾಗಿ ಸಾಮ್ರಾಜ್ಯದ ವಿಸ್ತರಣೆಗಾಗಿ ಅನೇಕ ದಂಡಯಾತ್ರೆಗಳನ್ನು ಪ್ರಾರಂಭಿಸಿದನು.

1. ಮಾಳವದ ದಂಡಯಾತ್ರೆ 1561
2. ಚುನಾರ ಕೋಟೆಯ ಆಕ್ರಮಣ
3. ಗೊಂಡಾವನದ ವಿಜಯ
4. ಅಂಬರದ ಶರಣಾಗತಿ
5. ಮೇವಾರದ ಜೊತೆ ಹೋರಾಟಗಳು.
6. ರಣಥಂಬೋರದ ವಶ
7. ಕಾಲಿಂಜರ ಕೋಟೆಯ ಮೇಲೆ ಆಕ್ರಮಣ
8. ಮಾರ್ವಡ ರಾಜ್ಯಗಳ ಶರಣಾಗತಿ.

9. ಗುಜರಾತಿನ ವಿಜಯ
10. ಬಿಹಾರ ಮತ್ತು ಬಂಗಾಳಗಳ ಮೇಲೆ ದಂಡೆಯಾತ್ರೆ.
11. ಕಾಬೂಲಿನ ಮೇಲೆ ಆಕ್ರಮಣ
12. ಕಾಶ್ಮೀರದ ವಶ
13. ಸಿಂಧ್‌ದ ವಿಜಯ
14. ಓಡಿಸ್ಸಾದ ಮೇಲೆ ದಾಳಿ.
15. ಬಲೂಚಿಸ್ಥಾನದ ವಶ.
16. ಕಂದಹಾರದ ವಿಜಯ
17. ದಕ್ಷಿಣ ಭಾರತದ ಮೇಲೆ ದಂಡೆಯಾತ್ರೆಗಳು.

**ಮಾಳವದ ದಂಡಯಾತ್ರೆ 1561**

ಮಾಳವ ರಾಜ್ಯವು ಸ್ವಾತಂತ್ರ್ಯ ಹೆಚ್ಚು ಸಂಪತ್ಭರಿತ ರಾಜ್ಯವಾಗಿತ್ತು. ಸಾರಂಗಪುರ ಇದರ ರಾಜಧಾನಿಯಾಗಿತ್ತು. "ಬಾಜ್ ಬಹದ್ದೂರ" ಮಾಳವದ ಅರಸನಾಗಿದ್ದು ನೃತ್ಯ ಮತ್ತು ಸಂಗೀತದ ದಾಸನಾಗಿದ್ದನು. ಇವನ ಅರಮನೆಯಲ್ಲಿ ಸಾವಿರಾರು ಜನ ಸಂಗೀತಗಾರರು ಮತ್ತು ಅಪ್ಸರೆಯಂತಹ ನೃತ್ಯಗಾರ್ತಿಯರು ಇದ್ದರು. ಅಪರೂಪದ ಸುಂದರಿ, ಶ್ರೇಷ್ಠ ನೃತ್ಯಗಾರತಿಯಾದ "ರೂಪಮತಿ" ಇವನ ಪ್ರೀತಿಯ ರಾಣಿಯಾಗಿದ್ದು ತನ್ನ ಲಾವಣ್ಯ, ಸೌಂದರ್ಯ, ಕಾವ್ಯ ಪ್ರತಿಭೆಯಲ್ಲಿ ಹೆಸರುವಾಸಿಯಾಗಿದ್ದಳು. ಇದರಿಂದ ಆಡಳಿತವನ್ನು ನಿರ್ಲಕ್ಷಿಸಿ ವಿಲಾಸದಲ್ಲಿ ತೊಡಗಿದ್ದನು. ಇದರಿಂದ ರಾಜ್ಯದಲ್ಲಿ ಅಶಾಂತಿ ಅರಾಜಕತೆ ಹರಡಿತ್ತು. ಇದರ ಲಾಭ ಪಡೆದು ತನ್ನ ಸಾಮ್ರಾಜ್ಯವನ್ನು ವಿಸ್ತರಿಸಲು ಮಾಳವದ ಮೇಲೆ ಮೂರು ಬಾರಿ ದಂಡಯಾತ್ರೆ ಮಾಡಿದನು.

ಮೊದಲ ದಾಳಿಯು ಅದಮ್‌ಖಾನನ ನೇತೃತ್ವದಲ್ಲಿ ಕ್ರಿ.ಶ. 1561 ರಲ್ಲಿ ನಡೆಯಿತು. ಇವನು ಮಾಳವದ ಮೇಲೆ ದಾಳಿ ಮಾಡಿದಾಗ ಅಲ್ಲಿಯ ಮುಸ್ಲಿಮ್ ಧಾರ್ಮಿಕ ಮುಖಂಡರು, ಮೌಲಿಗಳು, ಖಾಜಿಗಳು ಇವನಿಗೆ ಖುರಾನ ಹಿಡಿದು ಸ್ವಾಗತಿಸಿದರು. ಆದರೆ ಇವನು ಅವರನ್ನು ನಿರ್ಲಕ್ಷಿಸಿ ಕೋಟೆಯನ್ನು ಪ್ರವೇಶಿಸಿ ಬಾಜ್ ಬಹದ್ದೂರನ ಸೈನ್ಯ ವನ್ನು ಸೋಲಿಸಿದನು. ಅವನ ಅರಮನೆಯನ್ನು ಹೊಕ್ಕು ಸಾವಿರಾರು ನೃತ್ಯಗಾರ್ತಿಯರನ್ನು, ಅರಸನ ಬಂಧುಗಳನ್ನು ಮತ್ತು ಸಂಗೀತಗಾರರನ್ನು ಸಮೋಹಿಕ ಅತ್ಯಾಚಾರಕ್ಕೆ ಒಳಡಿಸಿ ಕೊಲೆಮಾಡಿಸಿದನು. ಇದರಿಂದ ತಪ್ಪಿಸಿಕೊಳ್ಳಲು ರೂಪಮತಿ ವಿಷಸೇವಿಸಿ ಮರಣ ಹೊಂದಿದಳು. ರಾಜಾ ಬಾಜ್‌ಬಹದ್ದೂರ ಪಲಾಯನ ಮಾಡಿದನು. ಅಲ್ಲಿ ದೊರತ ಅಪಾರ ಸಂಪತ್ತನ್ನು ಅರಮನೆಗೆ ಒಪ್ಪಸದೇ ಸಾರಂಗಪುರ ಸುಂದರ ಸ್ತ್ರೀಯರ ಅತ್ಯಾಚಾರದಲ್ಲಿ ಅದಮ್ ಖಾನ ನಿರತನಾಗಿದ್ದನು. ಸಾಮ್ರಾಟನ ಆಜ್ಞೆಗಳನ್ನುೆ ಮತ್ತು ಆದೇಶಗಳನ್ನು ನಿರ್ಲಕ್ಷಿಸಿ ಸರ್ವಾಧಿಕಾರಿಯಂತೆ ವರ್ತಿಸತೊಡಗಿದನು.

ಎರಡನೇ ಬಾರಿ ಮಾಳವದ ಮೇಲೆ ಅಕ್ಬರನು ದಾಳಿ ಮಾಡಿ ಅಹಂಕಾರಿ ಅದಮ್‌ಖನನ್ನು ಬಂಧಿಸಿ, ಪೀರ್‌ಮಹಮ್ಮದ್‌ನನ್ನು ಮಾಳವದ ಆಡಳತಾಧಿಕಾರಿಯಾಗಿ ನೇಮಕ ಮಾಡಿದನು.

ಪಲಾಯನಗೊಂಡ ಬಾಜ್ ಬಹದ್ದೂರ ಸೈನ್ಯವನ್ನು ಸಂಘಟಿಸಿ ಪೀರ್‌ಮಹಮ್ಮದ್‌ನನ್ನು ಸೋಲಿಸಿ ಕೊಂದು ಹಾಕಿದನು. ಆಗ ಅಕ್ಬರನು ಮೂರನೇಯ ಸಲ ಮಾಳವದ ಮೇಲೆ ದಾಳಿ ಮಾಡಿ ಬಾಜ್ ಬಹದ್ದೂರನನ್ನು ಸೋಲಿಸಿ, ಬಂದಿಸಿದನು. ಮತ್ತು ಕೆಲ ದಿನಗಳ ನಂತರ ಅವನ್ನು ಕ್ಷಮಿಸಿ ತನ್ನ ಆಸ್ಥಾನದಲ್ಲಿ ಮನ್‌ಸಬ್ದಾರನ್ನಾಗಿ ನೇಮಕ ಮಾಡಿದನು.

**ಚುನಾರ ಕೋಟೆ ಜಾನಪುರಗಳ ಮೇಲೆ ಆಕ್ರಮಣ**

ಅಕ್ಬರನು ದೆಹಲಿ ಮತ್ತು ಆಗ್ರಾಗಳನ್ನು ವಶ ಪಡಿಸಿಕೊಂಡ ಕೂಡಲೆ ಪೂರ್ವದ ಪ್ರದೇಶಗಳ ಮೇಲೆ ದಾಳಿ ಮಾಡಲು "ಅಲಿಕುಲಿಖಾನನ" ನೇತೃತ್ವದಲ್ಲಿ ಸೈನ್ಯ ಕಳುಹಿಸಿಕೊಡಲಾಗಿತ್ತು. ಇವನು ಅಲ್ಲಿಯ ಅಫಘನ್ ನಾಯಕರನ್ನು ಸೋಲಿಸಿ ಆ ಪ್ರಾಂತದ ರಾಜ್ಯಪಾಲನಾಗಿ ನೇಮಕಗೊಂಡಿದ್ದನು. ಬೈರಮ್‌ಖಾನನ ಪತನ ನಂತರ ಅಕ್ಬರನ ಆಡಳಿತದ ಅಪ್ರಾಪ್ತತೆಯ ಲಾಭ

ಪಡೆದು ಸ್ವತಂತ್ರ್ಯ ಅರಸರಂತೆ ವರ್ತಿಸತೊಡಗಿದರು. ಕೇಂದ್ರಕ್ಕೆ ಸಲ್ಲಿಸುವ ಯಾವುದೇ ಕಂದಾಯವಾಗಲಿ, ನಜರಾಣವಾಗಲಿ ಮತ್ತು ಸೈನ್ಯವಾಗಲಿ ಸಲ್ಲಿಸದೇ ಕೇಂದ್ರವನ್ನು ನಿರ್ಲಕ್ಷಿಸದ್ದರು. ಇದರಿಂದ ಅಕ್ಬರನ್ನು ಸೈನ್ಯ ಸಮೇತ ದಾಳಿ ಮಾಡಿದಾಗ ಅಲಿಕುಲಿಖಾನ ಮತ್ತು ಅವನ ಸಹೋದರ ಬಹದ್ದೂರಖಾನರು ಅಕ್ಬರನಿಗೆ ಶರಣಾಗತಿಯಾಗಿ ಅಪಾರ ಸಂಪತ್ತನ್ನು ಒಪ್ಪಿಸಿದರು. ಅಕ್ಬರನು ಇವರಿಗೆ ಕ್ಷಮಿಸಿ ಅದೀಕಾರದಲ್ಲಿ ಮುಂದುವರಿದನು. ಮತ್ತು ಇನ್ನೊಬ್ಬ ದಂಡನಾಯಕನಾಗಿದ್ದ ಅಸಫ್‌ಖಾನನನ್ನು ಚುನಾರಕೋಟೆಯನ್ನು ವಶ ಪಡಿಸಿಕೊಂಡು ಮೊಘಲ್ ಸಾಮ್ರಾಜ್ಯಕ್ಕೆ ಸೇರಿಸಿದನು.

**ಗೊಂಡಾವನದ ವಿಜಯ**

ಗೊಂಡಾವನವನ್ನು ರಜಪೂತ ಅರಸನಾದ ದಳಪತ್‌ಷಾನ ವಿಧುವೆ ರಾಣಿ "ದುರ್ಗಾವತಿಯು ತನ್ನ ಅಪ್ರಾಪ್ತ ಮಗ ವೀರನಾರಾಯಣನನ್ನು" ಸಿಂಹಾಸದಲ್ಲಿ ಕೂಡಿಸಿ ಆಡಳತ ಮಾಡುತ್ತಿದ್ದಳು. ರಾಣಿ ದುರ್ಗಾವತಿ ಅತ್ಯಂತ ದೈರ್ಯಶಾಲಿಯು ಆಡಳತಚತುರಳು ಮತ್ತು ಮುತ್ಸದ್ದೀಯಾಗಿದ್ದು ರಾಜಧಾನಿ ಚೌರಗ್ರಹದಿಂದ ಬಲಾಡ್ಯ 53 ಕೋಟೆಗಳನ್ನು ಆಳುತ್ತಿದ್ದಳು. ಇವಳು ದಕ್ಷಾಡಳಿತದಿಂದಾಗಿ ಗೊಂಡಾವನ ರಾಜ್ಯ ಅತ್ಯಂತ ಶ್ರೀಮಂತ ಮತ್ತು ಸಂಪತ್‌ಭರಿತ ರಾಜ್ಯವಾಗಿತ್ತು. ಬಲಾಡ್ಯ ಸೈನ್ಯವನ್ನು ಹೊಂದಿದ್ದು ಅನೇಕ ಪರಾಕ್ರಮಗಳಿಗೆ ಹೆಸರುವಾಸಿಯಾಗಿದ್ದಳು.

ಅಕ್ಬರನು ತನ್ನ ಸಾಮ್ರಾಜ್ಯವನ್ನು ವಿಸ್ತರಿಸಲು ಗೊಂಡಾವನದ ಮೇಲೆ ದಾಳಿ ಮಾಡಿ ರಾಯಭಾರಿಯ ಮೂಲಕ ಸಾರ್ವಭೌಮತ್ವವನ್ನು ಒಪ್ಪಿ ಸಾಮಂತರಾಜ್ಯವಾಗಲು ಒತ್ತಾಯಿಸಿದನು. ಸ್ವಾಭಿಮಾನಿ ಮತ್ತು ಸ್ವಾತಂತ್ರ್ಯಪ್ರೀಯಳಾದ ದುರ್ಗಾವತಿಯು ಮೊಘಲ್ ಸಾರ್ವಭೌಮತ್ವ ಒಪ[ಪಿಕೊಳ್ಳದೆ ಯುದ್ಧಕ್ಕೆ ಸಿದ್ಧಳಾದಳು. ಎರಡು ಸೈನ್ಯದ ಮಧ್ಯ ನರಹಿ ಎಂಬಲ್ಲಿ ಕ್ರಿ. ಶ 1564 ರಲ್ಲಿ ಯುದ್ಧವಾಯಿತು. ವೀರನಶಾರಾಯಣ ಯುದ್ಧದಲ್ಲಿ ಗಾಯಗೊಂಡು ಪಾಲಾಯನ ಮಾಡಿದರೆ, ತಾಯಿ ದುರ್ಗಾವತಿ ಸೋಲಿನ ಭಯದಿಂದ ತನ್ನನ್ನು ತಾನೆ ಇರಿದುಕೊಂಡು ಆತ್ಮಹತ್ಯ ಮಾಡಿಕೊಂಡಳು ಕೋಟೆಯನ್ನು ಗೆದ್ದ ಅಶಫ್‌ಖಾನ ಅಪಾರ ಸಂಪತ್ತನ್ನು, 200 ಆನೆಗಳನ್ನು ಹಾಗೂ ದುರ್ಗಾವತಿಯ ತಂಗಿ ಕಮಲಾಯನ್ನು ಅಕ್ಬರನಿಗೆ ಕಾಣಿಕೆಯಾಗಿ ಕಳುಹಿಸಿಕೊಟ್ಟನು.

**ಅಂಬರದ ಶರಣಾಗತಿ,.**

ಅಂಬರದ ರಾಜ್ಯವು ಸಹ ಅತ್ಯಂತ ಶ್ರೀಮಂತರಾಜ್ಯವಾಗಿದ್ದು, ಜೈಪುರ ಅದರ ರಾಜಧಾನಿಯಾಗಿತ್ತು. ಇದನ್ನು ರಜಪೂತ ದೊರೆ "ರಾಜಾ ಬಿಹಾರಿಮಲ್ಲನು" ಆಳುತ್ತಿದ್ದನು. ಅಕ್ಬರನು ಅಜಮೀರದ ಮೊಯಿನೂದ್ದೀನ್ ಚಿಸ್ತಿಯ ಸಮಾಧಿಯನ್ನು(ದರ್ಗಾ) ಸಂಧರ್ಶಿಸಲು ಅಜಮೀರಕ್ಕೆ ಹೋಗಿದ್ದನು. ಅಲ್ಲಿ ಅಂಬರದ ರಾಜಾ ಬಿಹಾರಿಮಲ್ಲನ ಪರಿಚಯವಾಗಿ ಮಿತ್ರರಾದರು ಮತ್ತು ತನ್ನ ರಾಜ್ಯ ಸ್ಥಿರವಾಗಿ ಭದ್ರವಾಗಿರಬೇಕಾದರೆ ಬಹುಸಂಖ್ಯಾತರಾದ ಹಿಂದೂಗಳ ಮತ್ತು ರಜಪೂತರ ಸಹಾಯ ಸಹಕಾರ ಪಡೆಯುವುದು ಸೂಕ್ತವೆಂದು ಭಾವಿಸಿದ ಅಕ್ಬರನು ರಾಜಕೀಯ ಸಂಭಂದ ಬೆಳಸಲು ಮುಂದಾದನು. ಅದೇ ರೀತಿ ಬೀಹಾರಿ ಮಲ್ಲನು ಅಕ್ಬರನ ಸಾರ್ವಭೌಮತ್ವನ್ನು ಮನ್ನಿಸಿ, ತನ್ನ ಮಗಳಾದ ಜೋದಾಬಾಯಿಯನ್ನು ಕೊಟ್ಟು ಮದುವೆ ಮಾಡಿದನು. ಅಕ್ಬರನು ಬಿಹಾರಿಮಲ್ಲನ ಮಗ ಭಗವಾನದಾಸ ಮತ್ತು ಮೊಮ್ಮಗ ಮಾನಸಿಂಗ್‌ನಿಗೆ ಮೊಘಲ್ ದರ್ಭಾರನಲ್ಲಿ 5000 ಸರದಾರರ ಮನ್ಸಬ್ದಾರರನ್ನಾಗಿ ನೇಮಿಸಿ ಗೌರವಿಸಿದನು. ಈ ರೀತಿಯಾಗಿ ಭಾರತದಲ್ಲಿ ಒಂದು ಹೊಸ ಯುಗಪರಂಪರೆ ಪ್ರಾರಂಭವಾಯಿತು. ಹಿಂದೂ-ಮುಸ್ಲೀಮ್ ಸಾಮರಸ್ಯಕ್ಕೆ ನಾದಿಯಾಯಿತು.

**ಮೇವಾರ(ಡ)ದ ಜೊತೆ ಹೋರಾಟಗಳು.**

ಮೊಘಲರ ಇತಿಹಾಸದಲ್ಲಿ ಮತ್ತು ಅಕ್ಬರನ ದಂಡಯಾತ್ರೆಗಳಲ್ಲಿ ಮೇವಾಡದ ದಂಡಯಾತ್ರೆಗಳು ಅತ್ಯಂತ ಪ್ರಮುಖವಾಗಿವೆ. ಮೇವಾಡ ರಾಜ್ಯವು ಬಹುಕಾಲದಿಂದಲೂ ಶ್ರೀಮಂತ, ಸ್ವಾಭಿಮಾನಿಗಳ, ಸ್ವಾತಂತ್ರ್ಯ ಪ್ರೀಯರ, ಶೌರ್ಯರ ನಾಡಾಗಿತ್ತು. ಚಿತ್ತೋಡ ಇದರ ರಾಜಧಾನಿಯಾಗಿತ್ತು. ದೆಹಲಿ ಸುಲ್ತಾನ ಅಲ್ಲಾವುದ್ದಿನ್ ಖಿಲ್ಜಿಯು ಯಿಂದ ಹಿಡಿದು ಬಾಬರ ಹುಮಾಯೂನ್‌ದವರೆಗೂ ಅನೇಕ ಅರಸರು ಈ ಪ್ರಾಂತವನ್ನು ಗೆದ್ದಿದ್ದರೂ, ಅದು ಮತ್ತೆ ಸ್ವತಂತ್ರಗೊಳ್ಳುತ್ತಿತ್ತು. ಬಾಬರನ ಕಾಲದಲ್ಲಿ ಇದೇ ಸಿಸೋಡಿ ಮನೆತನದ ರಾಣಾ

ಸಂಗ್ರಮಸಿಂಗ್‌ನು ಅವನ ಜೋತೆ ಹೋರಾಡಿ ಸೋತಿದ್ದರು. ಅದು ತಾತ್ಕಾಲಿಕವಾಗಿತ್ತು. ಈಗ ಮೇವಾಡನ್ನು ರಾಣಾ ಸಂಗ್ರಾಮಸಿಂಗ್‌ನ ಮಗ "ರಾಜಾ ಉದಯಸಿಂಗ್ " ಆಳುತ್ತಿದ್ದನು.

ಅಕ್ಬರನು ಈ ಮೇವಾಡಿನ ಮೇಲೆ ದಂಡಯಾತ್ರೆ ಮಾಡಲು ಅನೇಕ ಕಾರಣಗಳಿದ್ದವು.

1. ಮೇವಾಡದ ಅರಸ ರಾಜಾ ಉದಯಸಿಂಗ್‌ನು ಅಕ್ಬರನ ಸಾರ್ವಭೌಮತ್ವವನ್ನು ವಿರೋಧಿಸಿದ್ದನು.
2. ಬಾಬರನ ಕಾಲದಿಂದಲೂ ಮೊಘಲರೊಡನೆ ವೈರತ್ವ.
3. ಮೇವಾಡದ ಶ್ರೀಮಂತಿಗೆ.
4. ಗುಜರಾತನ್ನು ಗೆಲ್ಲಬೇಕಾದರೆ ಮೇವಾಡನ್ನು ಗೆಲ್ಲಬೇಕೀತ್ತು ಅದು ಅಂತಹ ಆಯಾಕಟ್ಟಾದ ಸ್ಥಳವಾಗಿತ್ತು.
5. ಮೇವಾಡ ಗೆಲ್ಲವುದು ಪ್ರತಿಷ್ಠೆಯ ಪ್ರಶ್ನೆಯಾಗಿತ್ತು.
6. ಮೇವಾಡದ ಉದಯಸಿಂಗ್‌ನು ಅಕ್ಬರನ ವೈರಿಗಳಿಗೆ (ಬಾಜ್ ಬಹದ್ದೂರನಿಗೆ) ರಾಜಾಶ್ರಯ ನೀಡಿದ್ದನು.
7. ಅಂಬರದ ಬಿಹಾರಿಮಲ್ಲನ ನೀತಿಯನ್ನು ವಿರೋಧಿಸಿ ಅವನಿಗೆ ಅವಮಾನ ಮಾಡಿದ್ದನು.

ಇದರಿಂದಾಗಿ ಅಕ್ಬರನು ಮೇವಾಡದ ಮೇಲೆ ಪ್ರಥಮ ದಂಡಯಾತ್ರೆಯನ್ನು 1567 ಸಪ್ಟೆಂಬರ್ 20 ರಂದು ಕೈಗೊಂಡು,ಅದರ ರಾಜಧಾನಿಯಾದ ಚಿತ್ತೋಡ ಕೋಟೆಯನ್ನು ಮುತ್ತಿಗೆ ಹಾಕಿದನು. ಅಸಮರ್ಥನಾದ ಉದಯಸಿಂಗನು ಹೆದರಿ, ರಕ್ಷಣೆಯ ಜವಬ್ದಾರಿಯನ್ನು ದಂಡನಾಯಕರಾದ ಜಯಮಲ್ಲ ಮತ್ತು ಪಟ್ಟಾಸಿಂಗ್‌ರಿಗೆ ಒಪ್ಪಿಸಿ ಅಱುಅವಳಿ ಪರ್ವತದಲ್ಲಿ ಅಡಗಿ ಕುಳಿತನು. ಆದರೆ ಜಯಮಲ್ಲ ಮತ್ತು ಪಟ್ಟಾಸಿಂಗ್‌ರ ನೇತೃತ್ವದಲ್ಲಿ ರಜಪೂತರ ಸೈನ್ಯವು ಅಕ್ಬರನ ವಿರುದ್ದ ನಾಲ್ಕು ತಿಂಗಳಕಾಲ ಹೋರಾಡಿ ರಣರಂಗದಲ್ಲಿ ಮೃತಪಟ್ಟರು. ಚಿತ್ತೋಡ ಕೋಟೆ ಅಕ್ಬರನ ವಶವಾಯಿತು. ರಜಪೂತರಂತಹ ವೀರಯೋಧರ ಬೆಂಬಲಕ್ಕಾಗಿ ಅವರ ಪ್ರೀತಿ ವಿಶ್ವಾಸ ಗೆಲ್ಲಲು ಜಯಮಲ್ಲ ಮತ್ತು ಪಟ್ಟಾಸಿಂಗ್‌ರ ಮೂರ್ತಿಗಳನ್ನು ಆಗ್ರಾದ ಕೋಟೆಯ ಮಹಾದ್ವಾರದಲ್ಲಿ ಸ್ಥಾಪಿಸಿ ಗೌರವಿಸಿದನು. ತಾತ್ಕಾಲಿಕವಾಗಿ ಮೇವಾಡ ಮೊಘಲ್‌ರ ವಶವಾಯಿತು

ಕ್ರಿ.ಶ. 1572 ರಲ್ಲಿ ಉದಯಸಿಂಗ್‌ನ ಮರಣದ ನಂತರ ಅವನ ಮಗ "ರಾಣಾ ಪ್ರತಾಪಸಿಂಗ್" ಮತ್ತೆ ಮೇವಾಡನ್ನು ವಶಪಡಿಸಿಕೊಂಡು ಸ್ವಾತಂತ್ರ್ಯವಾಗಿ ಆಳಲಾರಂಭಿಸಿದನು. ಕ್ರಿ. ಶ 1576 ರಲ್ಲಿ ಅಕ್ಬರನು ಮತ್ತೆ ಮೇವಾಡನ್ನು ವಶಪಡಿಕೊಳ್ಳಲು ಮಾನಸಿಂಗ್ ಮತ್ತು ಅಶಫ್‌ಖಾನರ ನೇತೃತ್ವದಲ್ಲಿ ಬಲಾಢ್ಯ ಸೈನ್ಯವನ್ನು ಕಳುಹಿದನು. ಇಬ್ಬರ ಮಧ್ಯದಲ್ಲಿ ಹಳದಿ ಘಾಟ ತಂಬ ಸ್ಥಳದಲ್ಲಿ ಗನಘೋರವಾದ ಯುದ್ಧ ಸಂಬವಿಸಿತು. ಮೋಘಲರ ಸೈನ್ಯಕ್ಕೆ ಬಲವಾದ ಪೆಟ್ಟು ನೀಡಿದನು. ಸೋಲಿನ ಅಂಚಿನಲ್ಲಿದ್ದ ಅಕ್ಬರನು ಮತ್ತಷ್ಟು ಸೈನ್ಯವನ್ನು ಹಳದಿಘಾಟಗೆ ಕಳುಹಿಸಿದನು. ಶತ್ರುಪಡೆಗಳು ರಾಣಾ ಪ್ರತಾಪಸಿಂಗನನ್ನು ಸುತ್ತು ವರಿದಿದ್ದಾಗ ಅವನು ಸಾವಿನ ದವಡೆಯಲ್ಲಿದ್ದಾಗ ಅವನ ಬಿಲಾರಝಾಲಾ ನೆಂಬ ಸ್ವಾಮಿ ಭಕ್ತನು ರಾಣಾನ ಕೀರಿಟವನ್ನು ತಗೆದುಕೊಂಡು ಹೋಗಿ ತಾನೆ ರಾಣಾನೆಂದು ಕೂಗಿದನು. ಆಗ ಮೊಘಲರ ಸೈನೀಕರು ಅವನೆ ನಿಜಾವಾದ ರಾಣನೆಂದು ಬಗೆದು ಅವನನ್ನು ಸುತ್ತುವರೆದು ಕೊಂದುಹಾಕಿದರು. ಇತ್ತ ಮೂರ್ಚೆಹೋಗಿದ್ದ ಅಸಲಿ ರಾಣಾನನ್ನು ಅವನ ನೆಚ್ಚಿನ ಕುದುರೆ ಚೇತಕ್ ರಣಭೂಮಿಯಿಂದ ಸುರಕ್ಷಿತ ಸ್ಥಳಕ್ಕೆ ತಗೆದುಕೊಂಡು ಹೋಗಿತ್ತು. ರಾಣಾ ಪ್ರತಾಪಸಿಂಗ್‌ನು ಈ ಯುದ್ಧದಲ್ಲಿ ಸೋತಿದ್ದರೂ ಚಿತ್ತೋಡ ಕೋಟೆಯನ್ನು ಪುನಃ ವಶಪಡಿಕೊಳ್ಳಲು ಪ್ರಯತ್ನ ಮುಂದುವರಿಸಿದನು.

ರಾಣಾ ಪ್ರತಾಪಸಿಂಗ್‌ನು ಮತ್ತೆ ಸೈನ್ಯವನ್ನು ಸಂಘಟಿಸಿ ಮೊಘಲರ ವಿರುದ್ದ ಯುದ್ದ ಮುಂದುವರಿಸಿದನು ಹೀಗೆ "ಚಿತ್ತೋಡ ಕೊಟೆಯನ್ನು ಪುನಃ ಪಡೆಯುವವರೆಗೆ ನಾನು ಮೆತ್ತೆನೆಯ ಸುಪ್ಪತ್ತಿಗೆಯ ಹಾಸಿಗೆಯ ಮೇಲೆ ಮಲಗುವದಿಲ್ಲ ಮತ್ತು ಬೆಳ್ಳಿಯ ತಟ್ಟೆಯಲ್ಲಿ ಊಟ ಮಾಡುವದಿಲ್ಲ" ಎಂದು ಪ್ರತಿಜ್ಞೆ ಮಾಡಿ ಯುದ್ದವನ್ನು ಪುನಃ ಆರಂಭಿಸಿದನು. ಮತ್ತು ಅನೇಕ ಕೋಟೆಗಳನ್ನು ವಶ ಪಡಿಸಿಕೊಂಡನು. ಅಕ್ಬರನು ಇವನ ಸ್ವಾತಂತ್ರ ಪ್ರೀಯತೆ ಮತ್ತು ಸ್ವಾಭಿಮಾನವನ್ನು ಮೆಚ್ಚಿ ಅನ ವಿರುದ್ದ ಉಗ್ರ ಕ್ರಮ ಕೈಗೊಳ್ಳಲಿಲ್ಲ.

**ರಣಥಂಬೋರದ ವಶ**

ರಣಥಂಬೋರ ಕೋಟೆ ಉತ್ತರ ಭಾರತದ ಮತ್ತೊಂದು ಪ್ರಮುಖ ರಾಜ್ಯವಾಗಿತ್ತು. ರಜಪೂತರ "ರಾಜಾ ಸೂರ್ಜನ್‌ರಾಯನು " ಈ ರಾಜ್ಯದ ರಾಜನಾಗಿದ್ದನು. ಹಿಂದೆ ಈ ರಾಜ್ಯವನ್ನು ಅನೇಕ ದೆಹಲಿಯ ಮುಸ್ಲೀಮ್ ಅರಸರು ಗೆದ್ದಿದ್ದರು. ಈ ಕೋಟೆಯನ್ನು ಗೆಲ್ಲುವದು ಪ್ರತಿಷ್ಠೆಯಾಗಿತ್ತು. ಆದರೆ ರಜಪೂತ ಅರಸರು ಅದನ್ನು ಪುನಃ ವಶಪಡಿಸಿಕೊಳ್ಳತ್ತಿದ್ದರು. ಈ ರಾಜ್ಯ ಅರಸನಾದ ಸೂರ್ಜನ್‌ರಾಯ ಮೇವಾಡ ಸಾಮಂತನಾಗಿದ್ದ ಆ ರಾಜನಿಗೆ ನಿಷ್ಟನಾಗಿದ್ದು ಯುದ್ದಕ್ಕೆ ಕಾರಣವಾಯಿತು.

ಒಂದುವರೆ ತಿಂಗಳ ಕಾಲ ಮುತ್ತಿಗೆಯ ನಂತರ ಕೋಟೆ ಮೊಘಲ್‌ರ ವಶವಾಯಿತು. ಸೂರ್ಜನ್‌ರಾಯನು ಅಕ್ಬರನ ಸಾರ್ವಭೌಮತ್ವ ಒಪ್ಪಿಕೊಂಡನು. ಮತ್ತು ರಾಜ್ಯನ್ನು ಅಕ್ಬರನಿಗೆ ಒಪ್ಪಿಸಿ, ಅವನ ಸೈನ್ಯದಲ್ಲಿ ಮನ್ಸಬ್ದಾರನಾಗಿ ನೇಮಕಗೊಂಡನು.

**ಕಾಲಿಂಜರ ಕೋಟೆಯ ಮೇಲೆ ಆಕ್ರಮಣ**

ಕಲಿಂಜರ ಕೋಟೆಯು ಸಂಪತ್‌ಭರಿತ ಮತ್ತು ಭದ್ರವಾದ ಕೋಟೆಯಾಗಿತ್ತು. ಅದನ್ನು ಗೆಲ್ಲಲೂ ಹೋಗಿದ್ದ ಷೇರ್‌ಷಹಾ ಅಲ್ಲಿಯೇ ಮರಣ ಹೊಂದಿದ್ದನು. ಅಕ್ಬರನು ಸಹ ಆ ಕೋಟೆಯನ್ನು ಗೆದ್ದು ತನ್ನ ಸಾಮ್ರಾಜ್ಯ ವಿಸ್ತರಿಸಲು ಕಲಿಂಜರದ ಮೇಲೆ ದಾಳಿ ಮಾಡಿದನು. ಈ ಕೋಟೆಯನ್ನು ರಜಪೂತರ ಅರಸ "ರಾಜಾ ರಾಮಚಂದ್ರನು " ಆಳುತ್ತಿದ್ದನು. ಅಕ್ಬರ ಸೈನ್ಯ ಮತ್ತು ಅವನ ಯುದ್ದಗಳ ಬಗ್ಗೆ ಕೇಳಿ ಯುದ್ಧ ಮಾಡದೇ ಶರಣಾಗತನಾದನು.

**ಮಾರ್ವಡ ರಾಜ್ಯಗಳ ಶರಣಾಗತಿ.**

ರಾಜಸ್ಥಾನದ ಮಾರವಾಡದ ಸಣ್ಣ ಪುಟ್ಟ ಸಂಸ್ಥಾನಗಳಾದ - ಜೋದಪುರನ್ನು ಚಂದ್ರಸೇನ, - ಬಿಕನೇರವನ್ನು ರಾಯ ಕಲ್ಯಾಣಮಲ್ಲ, ಮತ್ತು - ಜೈಸಲ್‌ಮೇರವನ್ನು ಹರರಾಯರು ಆಳುತ್ತಿದ್ದರು. ತನ್ನ ಸಾಮ್ರಾಜ್ಯದ ವಿಸ್ತರಣೆಗಾಗಿ ಅಕ್ಬರನು ಸೈನ್ಯ ಸಮೇತನಾಗಿ ಮಾರವಾಡದ ನಾಗಾಉರ್‌ಗೆ ಭೇಟಿ ಕೊಟ್ಟನು. ಅಕ್ಬರನು ಬಂದ ಸುದ್ದಿ ತಿಳಿದ ಈ ಅರಸರು ಮೊಘಲ್ ಚಕ್ರವರ್ತಿಯನ್ನು ಸಂದರ್ಶಿಸಿ ಅವನ ಸಾರ್ವಾಧಿಕಾರವನ್ನು ಮನ್ನಿಸಿ ಸಾಮಾಂತರಾದರು. ಅಕ್ಬರನು ಬಿಕನೇರದ ಮತ್ತು ಜೈಸಲ್‌ಮೇರದ ರಾಜಕುಮಾರಿಯರನ್ನು ವಿವಾಹವಾದನು. ಹೀಗೆ ಕ್ರಿ. ಶ. 1570 ರ ಹೊತ್ತಿಗೆ ಎಲ್ಲ ಮಾರವಾಡದ ಸಂಸ್ಥಾನಗಳು ಮೊಘಲ್ ಚಕ್ರಾಧಿಪತ್ಯಕ್ಕೆ ಸೇರಿದವು.

**ಗುಜರಾತಿನ ವಿಜಯ**

ಗುಜರಾತ ರಾಜ್ಯವು ಕೃಷಿ, ಉದ್ದಿಮೆ ಮತ್ತು ವಾಣಿಜ್ಯಗಳ ಪ್ರಧಾನ ಕೇಂದ್ರವಾಗಿದ್ದು,ಭಾರತದ ಶ್ರೀಮಂತ ಮತ್ತು ಸಂಪತ್‌ಭರಿತ ರಾಜ್ಯವಾಗಿತ್ತು. ಸೂರತ್, ಕ್ಯಾಂಬೆ, ಸೌರಾಷ್ಟ ಮತ್ತು ಬೊರಚ್‌ಗಳು ವಿಖ್ಯಾತ ರೇವು ಪಟ್ಟಣಗಲಾಗಿದ್ದು, ವಿದೇಶಿ ವ್ಯಾಪಾರದ ಪ್ರಮುಖ ಕೇಂದ್ರಗಳಾಗಿದ್ದವು. ವಿದೇಶಿ ವ್ಯಾಪಾರ ಮತ್ತು ಹಜ್ಜ ಯಾತ್ರೆಗೆ ಇದು ಪ್ರಮುಖ ಮಾರ್ಗವಾಗಿತ್ತು. ಇಲ್ಲಿಯ ಅರಸ "ಮೂರನೇಯ ಮುಜಾಫರ್‌ಷಹಾ " ಅಸಮರ್ಥನಾಗಿದ್ದನು. ಅಲ್ಲದೆ ಅಕ್ಬರನ ಅನೇಕ ವೈರಿಗಳು ಇಲ್ಲಿ ಆಶ್ರಯ ಪಡೆದಿದ್ದರು. ಈ ಕಾರಣಗಳಿಂದ ಅಕ್ಬರನು ಕ್ರಿ.ಶ. 1572 ರಲ್ಲಿ ಮಿರ್ಜಾ ಮಹಮ್ಮದ್ ಅಟಕ್‌ಖಾನನ ನೇತೃತ್ವದಲ್ಲಿ ಭೃಹತ್ ಸೈನ್ಯವನ್ನು ಕಳುಹಿಸಿ ದಾಳಿ ಮಾಡಿದನು. ಮೂರನೇ ಮುಜಾಫರ್ ಮತ್ತು ಅವನ ಆಶ್ರಯ ಪಡೆದಿರುವ ಅಕ್ಬರ್ ವೈರಿ ಬಂಧುಗಳಾಗಿದ್ದ ಇಬ್ರಾಹಿಮ್ ಹುಸೇನ್ ಮಿರ್ಜಾ ಮತ್ತು ಮಹಮ್ಮದ್ ಹುಸೇನ್ ಮಿರ್ಜಾ ಒಂದು ಗೂಡಿ ದೊಡ್ಡ ಸೈನ್ಯದೊಂದಿಗೆ ಎದುರಾದರು. ಇವರ ನಡುವೆ ಸರನಾಲ ಎಂಬಲ್ಲಿ ಭೀಕರ ಯುದ್ಧ ನಡೆಯಿತು. ವೈರಿ ಪಡೆಗಳು ಸೋತು ಬಂಧಿತರಾದರು. ಅವರನ್ನು ಸೆರೆಮೆಗೆ ಹಾಕಿ ಚಿತ್ರಹಿಂಸೆ ನೀಡಿ ಕೊಲ್ಲಲಾಯಿತು. ಸಂಪೂರ್ಣ ಗುಜರಾತನ್ನು ವಶಪಡಿಸಿಕೊಂಡು ಮಿರ್ಜಾ ಮಹಮ್ಮದ್ ಅಟಕ್‌ಖಾನನನ್ನು ರಾಜ್ಯಪಾಲನನ್ನಾಗಿ ಮತ್ತು ರಾಜಾ ತೋಡರಮಲ್ಲನನ್ನು ಕಂದಾಯ ಸಚಿವನನ್ನಾಗಿ ನೇಮಿಸಿ ಆಡಳಿತ ರೂಪಿಸಿ ದೆಹಲಿಗೆ ಹಿಂತೂರುಗಿದನು.

**ಬಿಹಾರ ಮತ್ತು ಬಂಗಾಳಗಳ ಮೇಲೆ ದಂಡೆಯಾತ್ರೆ.**

ಗುಜರಾತದಂತೆ ಬಂಗಾಳ ಬಿಹಾರ ಪ್ರಾಂತವು ಅತ್ಯಂತ ಶ್ರೀಮಂತರಾಜ್ಯವಾಗಿತ್ತು. ಕ್ರಿ. ಶ. 1568 ರಲ್ಲಿಯೇ ಇಲ್ಲಿಯ ಅರಸ "ಸುಲೇಮಾನ " ತನ್ನ ಶಕ್ತಿಯನ್ನು ಅರಿತು ಮೊಘಲರ ಸಾರ್ವಭೌಮತ್ವವನ್ನು ಮನ್ನಿಸಿ ಸಾಮಂತನಾಗಿ ಮುಂದುವರಿದಿದ್ದನು. ಇವನ ಮರಣದ ನಂತರ ಅಂದರೆ ಕ್ರಿ. ಶ. 1572 ರಲ್ಲಿ ಇವನ ಮಗ ದಾವುದ್ ಖಾನ ಅಧಿಕಾರಕ್ಕೆ ಬಂದ ಕೂಡಲೆ ತಾನು ಸ್ವತಂತ್ರ್ಯ

ಅರಸನೆಂದು ಘೋಷಿಸಿಕೊಂಡು ಕೇಂದ್ರಕ್ಕೆ ಕೊಡಬೇಕಾಗಿದ್ದ ವಂತಿಗೆಯನ್ನು ನಿಲ್ಲಿಸಿದನು. ಅಷ್ಟೆಅಲ್ಲದೆ ಮೊಘಲ್‌ರ ಗಡಿ ಪ್ರದೇಶಗಳನ್ನು ಲೂಟಿ ಮಾಡುವದರಲ್ಲಿ ನಿರತನಾದನು. ಇವನ ಕಿರುಕುಳ ಸಹಿಸದೇ ಅಕ್ಬರನು ಹುಸೇನ್ ಕುಲಿಖಾನ್, ಮುಜಾಫರ್ ಖಾನ, ಮತ್ತು ರಾಜಾ ತೊಡರಮಲ್ಲರ ನೇತೃತ್ವದಲ್ಲಿ ದಾಳಿ ಮಾಡಿಸಿದನು. ರಾಜ್ ಮಹಲ್ ಎಂಬಲ್ಲಿ ದಾವುದ್‌ಖಾನ ಮತ್ತು ಮೊಘಲ್ ಮಧ್ಯ ನಡೆದ ಯುದ್ಧದಲ್ಲಿ ಸರೆಸಿಕ್ಕ ದಾವುದ್‌ಖಾನನ ರುಂಡವನ್ನು ಕತ್ತರಿಸಿ ರಾಕಧಾನಿ ತಾಂಡಾದ ಕೋಟೆಬಾಗಿಲಿಗೆ ತೂಗು ಹಾಕಲಾಯಿತು. ಹುಸೇನ್ ಕುಲಿಖಾನ್ ರಾಜ್ಯಪಾಲನ್ನಾಗಿ ನೇಮಿಸಿ ಆಡಳಿತ ರೂಪಿಸಿದನು.

**ಕಾಬೂಲಿನ ಮೇಲೆ ಆಕ್ರಮಣ.**

ಕಾಬೂಲ್ ಅಕ್ಬರ್ ಮತ್ತು ಅವನ ಪೂರ್ವಜರ ಮೂಲ ನೆಲೆಯಾಗಿತ್ತು. ಭಾರತದ ಮೇಲೆ ಅಧಿಪತ್ಯ ಸ್ಥಾಪಿಸಿದ ಮೇಲೆ ಈ ಪ್ರಾಂತಕ್ಕೆ ಅಕ್ಬರ ತಂಗಿಯ ಗಂಡ ಮತ್ತು ಮಲ ಸಹೋದರನಾದ "ಮಿರ್ಜಾ ಹಮೀದ್ ಹಕಿಮ್ " ನನ್ನು ರಾಜ್ಯಪಾಲನನ್ನಾಗಿ ನೇಮಿಸಲಾಗಿತ್ತು. ಅಕ್ಬರನ ಧಾರ್ಮಿಕ ಉದಾರ ನೀತಿಯಿಂದಾಗಿ ಅನೇಕ ಸಂಪ್ರದಾಯ ಮುಸ್ಲೀಮ್‌ರು, ಧಾರ್ಮಿಕ ಮುಖಂಡರು, ಖಾಜಿಗಳು ಮತ್ತು ಮೌಲಿಗಳು ಅಸಮದಾನಗೊಂಡಿದ್ದರು. ಇವರೆಲ್ಲರು ಸೇರಿ ಅಕ್ಬರ ವಿರುದ್ಧ ಮಿರ್ಜಾ ಹಮೀದ್ ಹಕೀಮ್‌ನನ್ನು ಹಿಂದೂಸ್ಥಾನದ ಮೊಘಲ್ ಚಕ್ರವರ್ತಿ ಮಾಡಲು ಸಂಚು ರೂಪಿಸಿ ದೊಡ್ಡ ಸೈನ್ಯ ಸಂಘಟಿಸಲಾರಂಭಿಸಿದ್ದರು. ಇದನ್ನು ಅರಿತ ಅಕ್ಬರನು ಕ್ರಿ.ಶ. 1581 ಅಗಸ್ಟ 30 ರಂದು ಮಾನಸಿಂಗ್‌ನ ನೇತೃತ್ವದಲ್ಲಿ ದೊಡ್ಡ ಸೈನ್ಯದೊಡನೆ ಕಾಬೂಲನ್ನು ಮುತ್ತಿಗೆ ಹಾಕಲು ಕಳುಹಿದನು. ಮಿರ್ಜಾ ಹಮೀದ್ ಹಕೀಮ್‌ನು ಸೋತು ಶರಣಾಗತಿಯಾದನು. ಅವನನ್ನು ಕ್ಷಮಿಸಿ ಗೃಹಬಂಧನದಲ್ಲಿರಿಸಿ, ತಂಗಿಯಾದ ಬುಕ್ರನ್ನೀಸಾ ಬೇಗಮ್‌ಳನ್ನು ಕಾಬೂಲಿನ ಆಡಳಿತಾಧಿಕಾರಿಯಾಗಿ ನೇಮಿಸಿದನು.

**ಕಾಶ್ಮೀರದ ವಶ**

ಕಾಶ್ಮೀರ ರಾಜ್ಯವು ಅತ್ಯಂತ ನೈಸರ್ಗಿಕ ಸುಂದರತಾಣವಗಿತ್ತು. ಭಾರತದ ಮುಕಟದಂತಿರುವ ಈ ರಾಜ್ಯವನ್ನು "ಸುಲ್ತಾನ್ ಯೂಸೋಫ್‌ಖಾನನು " ಆಳುತ್ತಿದ್ದನು. ತನ್ನ ಸಾಮ್ರಾಜ್ಯ ವಿಸ್ತರಿಸಲು ಈ ಸುಂದರತಾಣ ಪಡೆಯುವ ಉದ್ದೇಶದಿಂದ ರಾಜಾ ಭಗವನ್‌ದಾಸ ಮತ್ತು ಕಾಸಿಮ್‌ಖಾನರ ನೇತೃತ್ವದಲ್ಲಿ ಸೈನ್ಯ ಕಳುಹಿಸಿದನು. ಸುಲ್ತಾನ್ ಯೂಸೋಫ್‌ಖಾನ ಯುದ್ಧ ಮಾಡದೆ ಶರಣಾದನು. ಅಕ್ಬರ ಅವನಿಗೆ 5000 ಸರದಾರರ ಮಮನಸಬ್‌ದಾರನಾಗಿ ನೇಮೀಸಿ ಕಾಶ್ಮೀರನ್ನು ತನ್ನ ಸಾಮ್ರಾಜ್ಯಕ್ಕೆ ಸೇರಿಸಿಕೊಂಡನು.

**ಸಿಂಧ್‌ದ ವಿಜಯ.**

ಸಿಂದ್ ಪ್ರಾಂತ ಭಾರತದ ವಾಯುವ್ಯ ಭಾಗದಲ್ಲಿದ್ದು ಅತ್ಯಂತ ಆಯಾಕಟ್ಟಿನ ಸ್ಥಳದಲ್ಲಿತ್ತು . ಇದರ ಮೇಲೆ ನಿಯಂತ್ರಣ ಸಾಧಿಸಿದರೆ ಮುಂದಿ ರಾಜ್ಯಗಳನ್ನು ಸುಲಭವಾಗಿ ಗೆಲ್ಲಬಹುದಾಗಿತ್ತು. ಈ ದಕ್ಷಿಣ ಸಿಂದ್ ಪ್ರದೇಶವನ್ನು "ಜಾನೀಬೇಗ್ " ಆಳುತ್ತಿದ್ದನು. ರಾಯಬಾರಿಯನ್ನು ಕಳುಹಿಸಿ ಮೊಘಲ್ ಸಾಮ್ರಾಜ್ಯದ ಸಾರ್ವಭೌಮತ್ವವನ್ನು ಒಪ್ಪಿಕೊಳ್ಳುವಂತೆ ಒತ್ತಾಯಿಸಲಾಯಿತು. ಆದರೆ ಜಾನೀಬೇಗ್ ಇದನ್ನು ವೀರೋಧಿಸಿದನು. ಇದರಿಂದ ಅಕ್ಬರನು ಕ್ರಿ.ಶ.1591 ರಲ್ಲಿ "ಮಿರ್ಜಾ ಅಬ್ದುಲ್ ರಹೀಮ್‌ನನ್ನು " ಮುಲ್ತಾನದ ರಾಜ್ಯಪಾಲನನ್ನಾಗಿ ನೇಮಿಸಿ ಸಿಂದ್ ಪ್ರಾಂತವನ್ನು ಗೆಲ್ಲಲು ಆದೇಶಿಸಿದನು. ಬೃಹತ್ ಸೈನ್ಯದೊಂದಿಗೆ ಸಿಂದ್ ಪ್ರಾಂತವನ್ನು ಗೆದ್ದ ಮಿರ್ಜಾ ಅಬ್ದುಲ್ ರಹೀಮ್ ಜಾನಿಬೇಗ್‌ನನ್ನು ಬಂಧಿಸಿ ದೆಹಲಿಗೆ ಕಳುಹಿಸಿದನು. ಅಕ್ಬರ ಅವನನ್ನು ಕ್ಷಮಿಸಿ 3000 ಸರದಾರರ ಮನ್ಸಬ್‌ದಾರನನ್ನಾಗಿ ನೇಮಕಮಾಡಿದನು.

**ಓಡಿಸ್ಸಾದ ಮೇಲೆ ದಾಳಿ.**

ಭಾರತದ ಪೂರ್ವ ಭಾಗದಲ್ಲಿ ಓಡಿಸ್ಸಾ ಒಂದು ಪ್ರಮುಖ ರಾಜ್ಯವಾಗಿತ್ತು. ಇದನ್ನು "ಖತ್ಲುಗ್‌ಖಾನ ಲೋಹಾಣಿ " ಮತ್ತು ಅವನ ಮಗ "ನಿಸ್ಸಾರ್‌ಖಾನ ಲೋಹಾಣಿ " ಆಳುತ್ತಿದ್ದರು. ಪೂರ್ವದ ಕಡೆ ತನ್ನ ಸಾಮ್ರಾಜ್ಯ ವಿಸ್ತರಿಸಲು ರಾಜಾ ಮಾನಸಿಂಗ್ ನಾಯಕತ್ವದಲ್ಲಿ ಸೈನ್ಯವನ್ನು ಕಳುಹಿಸಿದನು. ರಾಜಾಮಾಸಿಂಗ್‌ನು ಓಡಿಸ್ಸಾವನ್ನು ಆಕ್ರಮಿಸಿಕೊಂಡು ತಂದೆ ಮಕ್ಕಳನ್ನ ಸೋಲಿಸಿ ವಶಪಡಿಸಿಕೊಂಡನು.

**ಬಲೂಚಿಸ್ಥಾನದ ವಶ.**

ಬಲೊಚಿಸ್ಥಾನ ಪ್ರಾಂತವನ್ನು ಅಫಘನ್ ಬುಡಕಟ್ಟು ಜನಾಂಗದವರು ಆಳುತ್ತಿದ್ದರು. ಇವರು ಮೊಘಲ್ ವ್ಯಾಪಾರಿಗಳ ಮೇಲೆ ಸದಾ ಕಿರುಕುಳ ದಾಳಿ ಮಾಡುತ್ತಿದ್ದರು. ಅನೇಕ ಸಲ ಸಾಮ್ರಾಜ್ಯದ ಕಂದಾಯದ ಹಣವನ್ನು ಲೂಟಿ ಮಾಡುತ್ತಿದ್ದರು. ಇದರಿಂದ ಅಕ್ಬರನು ಇವರ ಕಿರುಕುಳ ತಡೆಗಟ್ಟಲು ಮೀರ್ ಮಸೂಮ್ ನ ನಾಯಕತ್ವದಲ್ಲಿ ಅಶ್ವಪಡೆಯನ್ನು ಕಳುಹಿಸಿಕೊಟ್ಟನು. ಇವನು ಇವರನ್ನು ಸೋಲಿಸಿ ಬಂಧಿಸಿ ಸಾರ್ವಜನಿಕವಾಗಿ ಚಿತ್ರಹಿಂಸೆ ಕೊಟ್ಟು ಕೊಲ್ಲಿಸುವದರ ಮುಖಾಂತರ ಅವರ ದಾಳಿಯನ್ನು ತಡೆಗಟ್ಟಿದನು. ಈ ಪ್ರಾಂತವನ್ನು ಸಂಪೂರ್ಣವಾಗಿ ವಶಪಡಿಸಿಕೊಂಡು ಭದ್ರವಾದ ಕೋಟೆಗಳನ್ನು ನಿರ್ಮಿಸಿದನು.

**ಕಂದಹಾರದ ವಿಜಯ.**

ಕಂದಹಾರ ಪರ್ಶಿಯಾದ ಪ್ರಾಂತವಾಗಿತ್ತು. ಇದನ್ನು ಮಜಾಫರ್ ಹುಸೇನ ಎಂಬುವನು ಪರ್ಶಿಯಾ ಷಹಾ ಚಕ್ರವರ್ತಿಯ ಸಾಮಂತ ರಾಜ್ಯಪಾಲನಾಗಿ ಆಡಳಿತ ನೋಡಿಕೊಳ್ಳುತ್ತದ್ದನು. ಆದರೆ ಚಕ್ರವರ್ತಿ ಮತ್ತು ಮಜಾಫರ್ ಹುಸೇನ್ ಸಂಬಂಧ ಹದಗೆಟ್ಟಿತ್ತು. ತನನ್ನು ಚಕ್ರವರ್ತಿಯು ವಜಾ ಗೊಳಿಸುವ ಅಥವಾ ಕೊಲ್ಲವ ಭೀತಿಯಲ್ಲಿ ಮುಜಾಫರ್ ಕಾಲ ಕಳೆಯುತ್ತಿದ್ದನು. ಇದೇ ಸಮಯದಲ್ಲಿ ಅಕ್ಬರನು ಕಂದಹಾರ ವಶಪಡಿಕೊಳ್ಳಲು ಸೈನ್ಯವನ್ನು ಕಳುಹಿಸಿದ್ದನು. ಕಂದಹಾರ ಭಾರತ ಮತ್ತು ಪಶ್ಚಿಮಾತ್ಯ ರಾಷ್ಟ್ರಗಳ ಪ್ರಮುಖ ದ್ವಾರವಾಗಿತ್ತು. ಮುಜಾಫರ್ ಇದೇ ಸೂಕ್ತ ಸಮಯವೆಂದು ಅಕ್ಬರನಿಗೆ ಶರಣಾಗತನಾಗಿ ಕಂದಹಾರ ಪ್ರಾಂತವನ್ನು ಅಕ್ಬರನಿಗೆ ಬಿಟ್ಟುಕೊಟ್ಟನು. ಅಕ್ಬರ್ ಇವನಿಗೆ 5000 ಮನ್‌ಸಬ್‌ದಾರನನ್ನಾಗಿ ನೇಮಕ ಮಾಡಿ ಆಶ್ರಯ ನೀಡಿದನು. ಮತ್ತು ಕಂದಹಾರನ್ನು ವಶಪಡಿಸಿಕೊಂಡು ಷಾಹ ಬೇಗನನ್ನು ರಾಜ್ಯಪಾಲನನ್ನಾಗಿ ನೇಮಕ ಮಾಡಿದನು.

**ದಕ್ಷಿಣ ಭಾರತದ ಮೇಲೆ ದಂಡೆಯಾತ್ರೆಗಳು.**

ಅಕ್ಬರನು ಇಡೀ ಉತ್ತರ ಭಾರತವನ್ನು ಗೆದ್ದ ಮೇಲೆ ಅಲ್ಲಾವುದ್ದನ್ ಖಿಲ್ಜಿಯಂತೆ ಇಡೀ ಭಾರತವನ್ನು ಗೆದ್ದು ತನ್ನ ಸಾಮ್ರಾಜ್ಯವನ್ನು ವಿಸ್ತರಿಸುವ ಮಹತ್ವಾಕಾಂಕ್ಷೆಯನ್ನು ಹೊಂದಿದ್ದನು. ಆಗ ದಕ್ಷಿಣ ಭಾರತದ ರಾಜಕೀಯ ಸ್ಥಿತಿಯು ಅನುಕೂಲವಾಗಿತ್ತು. ಕ್ರಿ.ಶ 1565 ರಲ್ಲಿ ದಕ್ಷಿಣ ಭಾರತದಲ್ಲಿ ವಿಜಯನಗರ ಸಾಮ್ರಾಜ್ಯವು ಪತನವಾಗಿ ಷಾಹಿ ಸುಲ್ತಾನ ರಾಜ್ಯಗಳಾದ ಅಹಮದನಗರ, ವಿಜಾಪುರ, ಗೋಲ್ಕೊಂಡ, ಬಿರಾರ್, ಮತ್ತು ಖಾನದೇಶಗಳು ತಮ್ಮಲ್ಲಿಯೇ ಹೋಡೆದಾಡುಕೊಳ್ಳುತ್ತಿದ್ದವು. ಇದರಿಂದ ಅಕ್ಬರನು ಈ ರಾಜ್ಯಗಳನ್ನು ವಶಪಡಿಸಿಕೊಳ್ಳಲು ರಾಯಬಾರಿಗಳನ್ನು ಕಳುಹಿಸಿಕೊಟ್ಟು ಮೊಘಲ್ ಸಾರ್ವಭೌಮತ್ವವನ್ನು ಒಪ್ಪಕೊಳ್ಳುವಂತೆ ಒತ್ತಾಯಿಸಿದನು. ಆದರೆ ಕ್ರಿ. ಶ. 1591 ರಲ್ಲಿ ಖಾನದೇಶದ "ಅಲಿಖಾನ" ಒಬ್ಬನೇ ಅಕ್ಬರನ ಸಾರ್ವಭೌಮತ್ವವನ್ನು ಒಪ್ಪಿಕೊಂಡನು. ಉಳಿದ ಷಾಹಿಸುಲ್ತಾನರು ಇದನ್ನು ತಿರಸ್ಕರಿಸಿದರು. ಅದ್ದರಿಂದ ಅಕ್ಬರನು ದಕ್ಷಿಣದ ಉಳಿದ ಷಾಹಿ ರಾಜ್ಯಗಳನ್ನು ಗೆಲ್ಲಲು ತನ್ನ ಮಗನಾದ ಮುರಾದ ಮತ್ತು ಅಬ್ದುಲ್ ರಹೀಮ್‌ನನ್ನು ಸೈನ್ಯದ ದಂಡನಾಯಕರನ್ನಾಗಿ ನೇಮಿಸಿ ಕಳುಹಿಸಿಕೊಟ್ಟನು.

**ಅಹಮದನಗರದ ವಿಜಯ 1595**

ಅಹಮದನಗರ ರಾಜ್ಯವನ್ನು ನಿಜಾಮ್ ಷಾಹಿ ಮನೆತನದ ಅಪ್ರಾಪ್ತ ಬಾಲಕ ಸಿಂಹಾಸದಲ್ಲಿದ್ದು ಆಡಳಿತದ ಜವಬ್ದಾರಿ ಸೋದರತ್ತೆಯಾದ ಚಾಂದಬೀಬಿ ನೋಡಿಕೊಳ್ಳುತ್ತಿದ್ದಳು. ಇವಳು ಅತ್ಯಂತ ಮುತ್ಸದ್ಧಿಯು, ರಾಜಕೀಯ ಚತುರಳು, ದಕ್ಷಾಡಳಿಗಾರಳು ಮತ್ತು ವೀರವನಿತೆಯಾಗಿದ್ದಳು. ಅಹಮದನಗರವನ್ನು ಮುತ್ತಿಗೆ ಹಾಕಿದ್ದ ಮೊಘಲ್ ದಂಡನಾಯಕರಾದ ಮುರಾದ ಮತ್ತು ಅಬ್ದುಲ್ ರಹೀಮ್‌ರ ನಡುವೆ ರಣತಂತ್ರ ರೂಪಿಸುವಲ್ಲಿ ಬಿನ್ನಾಭಿಪ್ರಾಯ ಮೂಡಿತ್ತು. ಮೊಘಲ್‌ರ ಸೈನ್ಯದ ಮುಂದೆ ಸೋಲು ಖಚಿತವೆಂದು ಆಲೋಚಿಸಿದ ಚಾಂದಬೀಬಿ ಅವಸರದಲ್ಲಿ ಇವರ ಬಿನ್ನಾಭಿಪ್ರಾಯದ ಲಾಭ ಪಡೆದು ಬಿರಾರ ಪ್ರಾಂತವನ್ನು ಮೊಘಲರಿಗೆ ಕೊಟ್ಟು ಒಪ್ಪಂದ ಮಾಡಿಕೊಂಡಳು. ಆದರೆ ಚಾಂದಬೀಬಿಯ ಈ ನೀತಿಯನ್ನು ಅಹಮದನಗರದ ಇತರ ಸರದಾರರು ಒಪ್ಪಿಕೊಳ್ಳದೇ ಅವಳನ್ನು ಮೋಸದಿಂದ ಕೊಲೆ ಮಾಡಿದರು. ಮತ್ತು ಬಿರಾರನ್ನು ವಶಪಡಿಸಿಕೊಳ್ಳಲು ಯುದ್ದ ಪ್ರಾರಂಭಿಸಿದರು.

ಇಡೀ ಅಹಮದನಗರವೇ ಕೈಗೆ ಸಿಗುತ್ತಿರುವಾಗ ಕೇವಲ ಬಿರಾರ ಪ್ರಾಂತ ಪಡೆದು ಒಪ್ಪಂದ ಮಾಡಿಕೊಂಡದ್ದು ಅಕ್ಬರಿಗೆ ಇಷ್ಟವಾಗಲಿಲ್ಲ., ಅದಕ್ಕಾಗಿ ಈ ಇಬ್ಬರು ದಂಡನಾಯಕರನ್ನು ವಾಪಸ ಕರೆಯಿಸಿಕೊಂಡು ಅಬುಲ್ ಫಜಲ್‌ನನ್ನು ಅವರ ಸ್ಥಾನದಲ್ಲಿ ನೇಮಿಸಿದನು. ಇವನು ಸುಲಭವಾಗಿ ಅಹಮದನಗರ ಸೈನ್ಯವನ್ನ ಸೋಲಿಸಿ ಅಹಮದನಗರವನ್ನು ವಶಪಡಿಕೊಂಡನು.

**ಖಾನ್ ದೇಶದ ಅಸಿರಗಡದ ವಿಜಯ.**

ಈ ಹಿಂದೆ ಕ್ರಿ. ಶ. 1591 ರಲ್ಲಿ ಖಾನದೇಶದ “ಅಲಿಖಾನ ” ಅಕ್ಬರನ ಸಾರ್ವಭೌಮತ್ವವನ್ನು ಒಪ್ಪಿಕೊಂಡು ಮೊಘಲ್‌ರ ಮಿತ್ರನಾಗಿದ್ದನು. ಆದರೆ ಅವನ ಮರಣದ ನಂತರ ಅಧಿಕಾರಕ್ಕೆ ಬಂದ ಅವನ ಮಗ “ಮೀರಾನ ಬಹಾದ್ದೂರಷಾ ” ಮೊಘಲ್ ಸಾರ್ವಭಮತ್ವವನ್ನು ಕಿತ್ತೊಗೆದು ಸ್ವತಂತ್ರರಾಜನಾಗಿ ಆಳಲಾರಂಭಿಸಿದನು. ಇದರಿಂದ ಅಕ್ಬರನು ಕ್ರಿ. ಶ 1599 ರಲ್ಲಿ ಖಾನದೇಶದ ಮೇಲೆ ದಾಳಿ ಮಾಡಿ ರಾಜಧಾನಿ ಬಬರ್ಹಾನಪುರವನ್ನು ವಶಪಡಿಕೊಂಡನು. ಸೋತ ಮೀರಾನ ಬಹಾದ್ದೂರ ಅಸಿರಘಡ ಕೋಟೆಯಲ್ಲಿ ಅಡಗಿ ಕುಳಿತನು. ಅಕ್ಬರನು ಅಸಿಗಡವನ್ನು ಮುತ್ತಿಗೆ ಹಾಕಿ ಅವನನ್ನು ಸೆರೆಮೆಗೆ ಅಟ್ಟಿದನು. ಖಾನದೇಶವನ್ನು ವಶಪಡಿಸಿಕೊಂಡು ತನ್ನ ಮಗ ಧನಿಯಾಲನನ್ನು ದಕ್ಷಿಣದ ರಾಜ್ಯಪಾಲನನ್ನಾಗಿ ನೇಮಿಸಿದನು. ಇದು ಅಕ್ಬರನ ಕೊನೆಯ ಯುದ್ಧವಾಗಿತ್ತು.

## ಅಕ್ಬರನ ಆಡಳಿತ ಪದ್ಧತಿ

ಅಕ್ಬರನು ಸುಮಾರು ಅರ್ದಶತಮಾನಕ್ಕಿಂತ(1556-1605) ಹೆಚ್ಚು ಕಾಲ ಅಧಿಕಾರ ನಡೆಸಿದನು. ಇದರಿಂದ ಭಾರತದಲ್ಲಿ ರಾಜಕೀಯ ಏಕತೆ ಸಾಧಿಸಿ,ವಿಶಾಲ ಸಾಮ್ರಾಜ್ಯ ಕಟ್ಟಿ ಆಡಳಿತದಲ್ಲಿ ಮಹತ್ವದ ಅನೇಕ ಬದಲಾವಣೆ ಮಾಡಿದನು.ಜನತೆಗೆ ದಕ್ಷವಾದ ಆಡಳಿತವನ್ನು ನೀಡಿ, ಸಾಮ್ರಾಜ್ಯದಲ್ಲಿ ಶಾಂತಿ ಮತ್ತು ಸುರಕ್ಷತೆಯನ್ನು ನೆಲೆಸುವಂತೆ ಮಾಡಿದನು.

ವಿಶಾಲವಾದ ಸಾಮ್ರಾಜ್ಯವನ್ನು ಆಳುವುದಕ್ಕಾಗಿ, ಕೇಂದ್ರ ಸರಕಾರ ಮತ್ತು ಪ್ರಾಂತಿಯ, ಸ್ಥಳಿಯ ಆಡಳಿತ ವಿಭಾಗಗಳಲ್ಲಿ ವಿಂಗಡಿಸಿ, ಸಮರ್ಥ ಅಧಿಕಾರಿಗಳನ್ನ ನೇಮಿಸಿ, ಆಡಳಿತ ನಿಯಮಗಳನ್ನು ರೂಪಿಸುವ ಮೂಖಾಂತರ ವ್ಯವಸ್ಥಿತವಾದ ಆಡಳಿತ ನೀಡಿದನು.

ಕೇಂದ್ರ ಸರಕಾರ.- ಸಾಮ್ರಾಟನು ಶಾಸಕಾಂಗ, ಕಾರ್ಯಾಂಗ, ಮತ್ತು ನ್ಯಾಯಾಂಗದ ಪರಮಾಧಿ ಹೊಂದಿದ ಚಕ್ರವರ್ತಿಯಾಗಿದ್ದನು. ಆದರೂ ಆಡಳಿತದ ಅನುಕೂಲಕ್ಕಾಗಿ, ಪ್ರಜೆಗಳ ಕಲ್ಯಾಣಕ್ಕಾಗಿ ತನ್ನ ಅಧಿಕಾರವನ್ನು ಮತ್ತು ಸಾಮ್ರಾಜ್ಯ ವರ್ಗಿಕರಿಸಿ ವಿಂಗಡಿದ್ದನು. ಅಬುಲ್ ಫಜಲನ “ಅಕ್ಬರ ನಾಮ ” ದಲ್ಲಿ ಸಾಮ್ರಾಟನು ಸೂರ್ಯೊದಯದಲ್ಲಿ ಜರೋಕಾಮ ದರ್ಶನ ದಲ್ಲಿ ಸಭೆ ನೆಡೆಸಿ ಸಾರ್ವಜನಿಕ ಸಮಸ್ಯೆಗಳನ್ನು ಬಗೆಹರಿಸುತ್ತಿದ್ದನು. ನಂತರ ತೆರದ ದರ್ಬಾರದಲ್ಲಿ ಪ್ರಾಂತಿಯ ಆಡಳಿತದ ಬಗ್ಗೆ ಚರ್ಚಿಸುತ್ತಿದ್ದನು. ಮಧ್ಯಾಹ್ನ ಸೈನಿಕ ಮನಸಬ್ ದಾರರ ನೇಮಕ ಬಡ್ತಿ, ಆರ್ಥಿಕ ವಿಷಯಗಳ ಬಗ್ಗೆ ಚರ್ಚಿಸುತ್ತಿದ್ದನು. ರಾತ್ರಿ ಊಟದ ನಂತರ ಕೆಲ ಗಂಟೆಗಳ ಕಾಲ ದೌಲತ ಖಾನದಲ್ಲಿ ಪಂಡಿತರ ತತ್ವಜ್ಞಾನಿಗಳ, ಮತ್ತು ವಿಧ್ವಾಂಸರ ಜೋತೆ ಚರ್ಚಿಸುತ್ತಿದ್ದರು

ಕೇಂದ್ರಿಯ ಮಂತ್ರಿಗಳು. ಕೇಂದ್ರ ಸರಕಾರದ ಆಡಳಿತದ ಅನುಕೂಲಕ್ಕಾಗಿ ಸಾಮ್ರಾಟನು ಸಮರ್ಥರಾದ, ಅರ್ಹತೆಹೊಂದಿದ ಮತ್ತು ಪ್ರಮಾಣಿರಾದವರನ್ನು ಪರೀಕ್ಷಿಸಿ ಅವರ ಯೋಗ್ಯತೆಗೆ ತಕ್ಕಂತೆ ಮಂತ್ರಿ ಸ್ಥಾನವನ್ನು ನೀಡುತ್ತಿದ್ದನು.

ವಕೀಯತ್(ವಕೀಲ್)(ಪ್ರಧಾನಿ ಮಂತ್ರಿ) ಮೊದಲು ಈ ಹುದ್ದೆಯನ್ನು ಭೈರಮ್ ಖಾನ ಹೊಂದಿದ್ದನು. ಆಗ ಈ ಖಾತೆ ಅತ್ಯಂತ ಮಹತ್ವದ ಹುದ್ದೆಯಾಗಿತ್ತು. ನಂತರದಲ್ಲಿ ಕಂದಾಯ ಮತ್ತು ಆರ್ಥಿಕ ಖಾತೆಗಳನ್ನು ಪ್ರತ್ಯೇಕ ಸೃಷ್ಠಿಸಿದ ನಂತರದಲ್ಲಿ ಇದರ ಮಹತ್ವ ಕಡಿಮೆಯಾಗಿ ಕೇವಲ ಸಾಮ್ರಾಟನಿಗೆ, ಮಂತ್ರಿಗಳಿಗೆ ಸಲಹೆ ಮಾಡುವದು, ಅರಸನ ಗೈರು ಹಾಜರಿಯಲ್ಲಿ ದೈನಂದಿನ ಆಡಳಿತ ನಿರ್ವಹಿಸುವದು, ಮತ್ತು ಸಭೆ ಕರೆಯುವದು ವಕೀಲನ ಮುಖ್ಯ ಕರ್ತವ್ಯಗಳಾಗಿದ್ದವು.

ದಿವಾನ್-ಎ-ಆಲ್(ಆರ್ಥಿಕಮಂತ್ರಿ);-ಅಕ್ಬರನ ಕಾಲದಲ್ಲಿ ಅಶಫ್ ಖಾನ, ಇತ್ಮದ್‌ಖಾನ, ಮುಜಾಫರ್ ಖಾನ, ಮತ್ತು ರಾಜಾ ತೋಡರಮಲ್ಲರು ಆರ್ಥಿಕ ಹಣಕಾಸಿನ ಮಂತ್ರಿಗಳಾಗಿದ್ದರು. ಸಾಮ್ರಾಜ್ಯದ ಆದಾಯ ಮತ್ತು ಇತರ ಆರ್ಥಿಕ ವಿಷಯಗಳ ಬಗ್ಗೆ

ಅರಸನಿಗೆ ಕಾನೂನು ರಚಿಸುವಲ್ಲಿ ಸಹಾಯ ಮತ್ತು ಸಲಹೆ ನೀಡುವದು, ಪ್ರಾಂತಗಳಿಂದ ಕಂದಾಯ ಮತ್ತು ಇತರ ಕರಗಳನ್ನು ನಿರ್ಧರಿಸುವದು, ವಸೂಲಿ ಮಾಡುವದು, ಮತ್ತು ವಿತರಣೆಯ ವ್ಯವಸ್ಥೆ ನೋಡಿಕೊಳ್ಳುವದು ಇವರ ಕರ್ತವ್ಯವಾಗಿತ್ತು.

ಮೀರ ಭಕ್ಷಿ(ರಕ್ಷಣಾ ಮಂತ್ರಿ);- ಸೈನಿಕರ ನೇಮಕ, ಮನ್‌ಸಬ್‌ದಾರರ ನೇಮಕ, ಬಡ್ತಿ, ವೇತನ ಮುಂತಾದ ವಿಷಯಗಳ ಬಗ್ಗೆ ದಾಖಲಿಸುವದು, ಸಾಮ್ರಾಟನಿಗೆ ಸಲಹೆ ನೀಡುವದು, ಹಾಗೂ ಕೋಟೆಗಳ ರಕ್ಷಣೆಯ ಕ್ರಮಕೈಗೊಳ್ಳುವದು ಇವನ ಕರ್ತವ್ಯಗಳಾಗಿದ್ದವು. ಇತನಿಗೆ ಸಹಾಯಕರಾಗಿ ಭಕ್ಷೀ ಗಳೆಂಬ ಅನೇಕ ಅಧಿಕಾರಿಗಳನ್ನು ನೇಮಿಸಲಾಗಿತ್ತು.

ಸದರ್-ಉಸ್-ಸದರ (ಧರ್ಮದತ್ತಿಗಳ ಮಂತ್ರಿ) ;- ಸಾಮ್ರಜ್ಯದ ಧಾರ್ಮಿಕ ವಿಷಯಗಳನ್ನು ಮತ್ತು ಚಕ್ರವರ್ತಿಯ ದತ್ತಿ ಮತ್ತು ದಾನ ವಿಭಾಗಗಳನ್ನು ನಿರ್ವಹಿಸುವದು. ಇಸ್ಲಾಂ ಧರ್ಮದ ಬೆಳವಣಿಗೆಗಾಗಿ ಅರಸನಿಗೆ ಸಲಹೆ ನೀಡುವದು. ಕೇಂದ್ರದಲ್ಲಿ, ನಗರಗಳಲ್ಲಿ, ಮತ್ತು ಪ್ರಾಂತಗಳಲ್ಲಿ ಖಾಜಿಗಳನ್ನು ನೇಮಕ ಮಾಡಿಕೊಳ್ಳುವದು. ದತ್ತಿ ದಾನಗಳಲ್ಲಿ ಬ್ರಷ್ಟಾಚಾರಿಗಳನ್ನು ಗೂರ್ತಿಸಿ ಶಿಕ್ಷಿಸುವದು ಇವನ ಪ್ರಧಾನ ಕಾರ್ಯಗಳಾಗಿದ್ದವು.

ಖಾನ-ಎ-ಸಮನ್( ಅರಮನೆಯ ಮಂತ್ರಿ ) ;- ಸಾಮ್ರಾಟನ ಕುಟುಂಬದ ಮತ್ತು ಅರಮನೆಯ ಅವಸ್ಯಕತೆಗಳನ್ನು ಪೂರೈಸುವದು, ಅದರ ಖರ್ಚಿನ ಬಾಬತ್ತಿನ ಲೆಕ್ಕಪತ್ರ ಇಡುವದು, ಅರಸನ ಅಂತಃಪುರದ ನಡೆಯುವ ಸಭೆ-ಸಮಾರಂಬಗಳ ಉಸ್ತುವಾರಿ ನೋಡಿಕೊಳ್ಳುವದು ಇವನ ಕೆಲಸಗಳಾಗಿದ್ದವು.

ಖಾಜಿ-ಉಲ್- ಖುಜಿಜತ್ ( ನ್ಯಾಯಾಂಗ ಮಂತ್ರಿ) ಸಾಮ್ರಾಟನ ನಂತರ ನ್ಯಾಯಾತೀರ್ಮಾನ ಕಾರ್ಯದ ಪ್ರಮುಖ ಅಧಿಕಾರಿಯಾಗಿದ್ದನ ಇಸ್ಲಾಮ್ ಧರ್ಮದ ಸರೀಯತ್ ದ ಪ್ರಕಾರ ನ್ಯಾಯಾ ತೀರ್ಮಾನ ಮಾಡುವದು, ಪ್ರಾಂತಗಳಲ್ಲಿ ಖಾಜಿಗಳ ನೇಮಕ ಮಾಡುವದು. ಪ್ರಾಂತಗಳಿಂದ ಬಂದ ವ್ಯಾಜ್ಯಗಳನ್ನು ಬಗೆಹರಿಸುವದು, ಇತನಿಂದ ಬಗೆಹರಿಯದ ವ್ಯಾಜ್ಯಗಳನ್ನು ಸ್ವತಃ ಚಕ್ರವರ್ತಿಯೇ ನಿರ್ವಹಿಸುವಂತೆ ವ್ಯವಸ್ಥೆಮಾಡುವದು ಇವನ ಕರ್ತವ್ಯಗಳಾಗಿದ್ದವು.

ಇತರ ಮಂತ್ರಿಗಳು. ;-

ದರೋಗಾ-ಎ-ಡಾಕ್ ಚೌಕಿ == ಅಂಚೆವಿಭಾಗದ ಮಂತ್ರಿ

ಮೀರ-ಅತೀಷ == ಸಿಡಿಮದ್ದಿನ ಮಂತ್ರಿ

ಮುಸ್ತವಫಿ == ಮಹಾಲೆಕ್ಕ ಪಾಲಕ

ಮುಶ್‌ರೀಫ್ == ಬಂದುರಗಳ ಮಂತ್ರಿ

ಮೀರ್ ಅರ್ಜಿ == ಮನವಿಗಳನ್ನು ಪಡೆಯುವ ಮಂತ್ರಿ

ಮೀರ್ ಬರ್ == ಕೋಟೆಗಳ ಉಸ್ತುವಾರಿ ಮಂತ್ರಿ

ಮಹತ್-ಸಿಬ್ == ಜನಗಣಿತಿ ಮಾಡಿಸುವ ಮಂತ್ರಿ

ಇವರ ಕೈಕೇಳಗೆ ಅನೇಕ ಗುಮಾಸ್ತರು, ರಕ್ಷಣೆಗೆ ಸೈನಿಕರು,ಗುಪ್ತಚಾರರು, ಮತ್ತು ಜವಾನರು ಕಾರ್ಯ ನಿರ್ವಹಿಸುತ್ತಿದ್ದರು

**ಪ್ರಾಂತಿಯ ಆಡಳಿತ ;-**

ಆಡಳಿತದ ಅನುಕೂಲಕ್ಕಾಗಿ ವಿಶಾಲವಾದ ಸಾಮ್ರಜ್ಯವನ್ನು ಸಾಮ್ರಾಟನು ಏಕರೂಪ ಆಡಳಿತ ವ್ಯವಸ್ಥೆಯುಳ್ಳ ಪ್ರಾಂತಗಳಾಗಿ ವಿಂಗಡಿಸಿದ್ದನು. ಇವುಗಳನ್ನು “ಸುಭಾ ” ಗಳೆಂದು ಕರೆದನು 1602 ರಲ್ಲಿದ್ದ 12ಸುಭಾಗಳ ಸಂಖ್ಯೆ 18 ರವರೆಗೆ ಹೆಚ್ಚಿಸಿದನು. ಈ ಸುಭಾಗಳು ಸಂಪೂರ್ಣವಾಗಿ ಕೇಂದ್ರದ ಆಧಿನದಲ್ಲಿದ್ದವು. ಆಗ್ರಾ, ಅವಧ, ಬಿಹಾರ, ಅಲಹಾಬಾದ, ಅಜಮೀರ, ಬಂಗಾಲ, ಕಾಬೂಲ್, ಲಾಹೋರ್, ಮುಲ್ತಾನ್, ಮಾಳ್ವ, ಅಹಮದಾಬಾದ್, ಬಿರಾರ್ ಮತ್ತು ಮುಂತಾದ ಸುಭಾಗಳಾಗಿದ್ದವು. ಇವುಗಳಲ್ಲದೇ ಅಕ್ಬರ ಸಾಮ್ರಾಟನ ಸವಾಧಿಕಾರವನ್ನು ಒಪ್ಪಿಕೊಂಡ ಅನೇಕ ಸಣ್ಣ-ಪುಟ್ಟ ರಾಜ್ಯಗಳು ಸಹ ಅಸ್ಥಿತ್ವದ್ದವು.

ಸಿಪಾಹ ಸಲರ್(ನಝೀಮ್)ರಾಜ್ಯಪಾಲ=ಸುಭಾದ ಪ್ರಮುಖ ಆಧಿಕಾರಿ

ದಿವಾನ್ == ಕೇಂದ್ರ ಮತ್ತು ಸುಭಾಗಳ ಮದ್ಯವರ್ತಿ ಅಧಿಕಾರಿ

ಸದರ್ == ಸುಭಾಗಳಲ್ಲಿಯ ದತ್ತಿ –ದಾನ ನೋಡಿಕೊಳ್ಳುವ ಸಚಿವ

ಖಾಜಿ == ಸುಭಾಗಳಲ್ಲಿಯ ನ್ಯಾಯಾಧೀಶ.

ಬಕ್ಷೀ == ಸುಭಾಗಳ ಸೈನಿಕ ಸಚಿವ

ಕೋತ್ವಾಲ ==ಸುಭಾದ ರಾಜದಾನಿ ನಗರಗಳಲ್ಲಿಯ ಪೋಲಿಸ್ ಸಚಿವ

ಸರ್ಕಾರ್ == ಜಿಲ್ಲಾಧಿಕಾರಿ

ಫೌಜದಾರ್ == ಜಿಲ್ಲೆಗಳ ರಕ್ಷಕ

ಶೇಕ್ ದಾರ & ಅಮೀಲ್ = ತಾಲೂಕ್ ಅಧಿಕಾರಿಗಳು

ಮುಖೀಯಾ (ಮುಖ್ದಮ್) ಪಟವಾರಿ == ಗ್ರಾಮಾಡಳಿತಾಧಿಕಾರಿಗ¼

## ಕಂದಾಯ ಪದ್ಧತಿ

ದೆಹಲಿ ಸುಲ್ತಾನರ ಕಾಲದಲ್ಲಿ ಸಾಕಷ್ಟು ದೋಷಗಳಿಂದ ಕೂಡಿದ್ದ ಆಡಳಿತ ಪದ್ಧತಿಯಲ್ಲಿ ಷೇರಸಹಾನು ಅನೇಕ ವೈಜ್ಞಾನಿ ಸುಧಾರಣೆಗಳನ್ನು ಜಾರಿಗೆ ತಂದನು. ಆದರೆ ಅವನ ನಂತರ ಅಸಮರ್ಥ ಉತ್ತಾರಾಧೀಕಾರಿಗಳಿಂದ ಆಡಳಿತದ ಸಂಪೂರ್ಣ ಹದೆಗಟ್ಟಿತು. ಕ್ರಿ.ಶ.1560 ರಲ್ಲಿ ಅಬ್ದುಲ್ ಮಜೀದ್ ಆಷಫಖಾನ, 1560 ರಲ್ಲಿ ಇತಮದ್ ಖಾನ & ಬಹಲೂಲ್ ಮಲೀಕ್ 1570 ರಲ್ಲಿ ಮುಜಾಫರ್ ಖಾನ ನಂತರದಲ್ಲಿ ರಾಜಾ ತೋಡರಮಲ್ ಕಂದಾಯ ಮಂತ್ರಿಗಳಾಗಿ ನೇಮಕರಾದರು. ರಾಜಾ ತೋಡರಮಲ್ ನು ಕಂದಾಯದಲ್ಲಿ ಪ್ರಮುಖ ಸುಧಾರಣೆಗಳನ್ನು ಜಾರಿಗೆ ತಂದನು. ಇತನು ಜಾರಿಗೆ ತಂದ ಸುಧಾರಣೆಗಳು ಬ್ರಿಟಿಷರ ಆಡಳಿತದಲ್ಲಿಯೂ ಮುಂದುವರಿದಿದ್ದವು. ರಾಜಾತೋಡರಮಲ್ ಜಾರಿಗೆ ತಂದ ಕಂದಾಯ ಪದ್ಧತಿಯನ್ನು "ಜಬತಿ ಪದ್ಧತಿ " ಅಥವಾ "ಬಂದೊಬಸ್ತ ಪದ್ಧತಿ " ಅಥವಾ "ದಹಸಾಲ್ ಪದ್ಧತಿ " ಎಂದು ಕರೆಯುತ್ತಿದ್ಧರು.

ರಾಜಾ ತೋಡರಮಲ್ ಜಾರಿಗೆ ತಂದ ಜಬತಿ ಪದ್ಧತಿಯ ಕಾನೂನುಗಳು ಅಥವಾ ಲಕ್ಷಣಗಳು.

ಭೂಮಿಯನ್ನು ಅಳತೆ ಮಾಡಲು ಹಗ್ಗದ ಬದಲು ಹೊಸ ಕಬ್ಬಿಣದ ಬಳೆಗಳ ಸರಪಳಿಯ ಉಪಯೋಗ. (60 ಗಜಗಳ ಉದ್ದಅಳತೆ)

ಹೊಸ ಭೂಮಾಪನ ಸಾದನವನ್ನು ಫಜಿಇಲಾಹಿ ಎಂದು ಕರೆದರು

ಇದರ ಒಂದು ಉದ್ದ-ಅಗಲದ ಅಳತೆಯನ್ನು ಬಿಗಾ ಎಂದು ಕರೆಯಲಾಯಿತು ಅಂದರೆ 60 ್ಠ60 =3600 ಚದರುಗಜಗ¼

ಭೂಮಿಯನ್ನು ಫಪವತ್ತೆತೆಯ ಆಧಾರದ ಮೇಲೆ 4 ಭಾಗಗಳಲ್ಲಿ ವಿಂಗಡನೆ

ಪೋಲಜ್ = ನೀರಾವರಿ ಹೊಂದಿದ ಫಲವತ್ತಾದ ಭೂಮಿ

ಪರೌಟಿ (ಪರೋತಿ) = ಮಳೆಯನ್ನೆ ಅವಲಂಬಿತ ಫಲವತ್ತಾದ ಭೂವಿ

ಚಚಾರ (ಕಚಾರ) = ಹುಲ್ಲುಗಾವಲು, ಫಲವತ್ತಾಗಿರದ ಗಟ್ಟಿ ಭೂಮಿ

ಬಂಜಾರ = ಕಲ್ಲು ಬಂಡೆಗಳಿಂದ ಕೂಡಿದ ಭೂಮಿ.

5.) ಪ್ರತಿ ವರ್ಗದ ಭೂಮಿಯ 10 ವರ್ಷಹಿಂದಿನ ಸರಾಸರಿ ಉತ್ಪಾದನೆಯ ಆಧಾರದ ಮೇಲೆ ಮುಂದಿನ 10 ವರ್ಷಗಳ ಕಾಲ ಕಂದಾಯ ನಿಗದಿಪಡಿಸಲಾಗುವದು.

6.) ರಾಜ್ಯಕ್ಕೆ 1/3 ಭಾಗ ಕಂದಾಯ ನಿಗದಿ

7.) ನಗದು ರೂಪದಲ್ಲಿ ಕಂದಾಯ ಅದಕ್ಕಾಗಿ ಉತ್ಪಾದಿಸಿದ ಬೆಳೆಗಳ ಬೆಲೆ ನಿರ್ದರಿಸಲಾತು.

8.) ರೈತರಿಗೆ ಪಟ್ಟಾವನ್ನು ನೀಡಲಾಯಿತು. ಪಟ್ಟಾದಲ್ಲಿ ರೈತನು ಹೊಂದಿದ ಭೂಮಿಯ ವಿಸ್ತೀರ್ಣ, ಅದರ ವರ್ಗ, ಮತ್ತು ಕಂದಾಯ ನಮೂದಿಸಲಾಗಿತ್ತು.

9.) ರೈತರಿಗೆ ಎಲ್ಲಾ ರೀತಿಯ ಪ್ರೋತ್ಸಾಹ ಕೋಡಲಾಯಿತು. ಸಂಕಟದ ಸಮಯದಲ್ಲಿ ಅವರಿಗೆ ಸಹಾಯ ಮಾಡುವ ಕ್ರಮ ರೂಪಿಸಲಾಗಿತ್ತು

10.) ಈ ಪದ್ದತಿಯನ್ನು ಇಡೀ ಸಾಮ್ರಾಜ್ಯದಲ್ಲಿ ಜಾರಿಗೆಯಲ್ಲಿ ಇರಲಿಲ್ಲ.

ಇದು ಬಿಹಾರ, ಅಲಹಾಬಾದ್, ಮಾಳವ, ಅವಧ, ಆಗ್ರಾ, ದೆಹಲಿ, ಲಾಹೋರ, ಮತ್ತು ಮುಲ್ತಾನಗಳಲ್ಲಿ ಜಾರಿಗೆ ತರಲಾಯಿತು.

ರಾಜಾತೋಡರಮಲ್ಲನು ಜಾರಿಗೆ ತಂದ ಪದ್ದತಿಯೂ ಅನೇಕ ಹಳೆಯ ದೋಷಗಳನ್ನು ತೊಡೆದು ಹಾಕುವಲ್ಲಿ ಸಫಲವಾದರೂ, ಸಂಪೂರ್ಣವಾಗಿ ಪರಿಪೂರ್ಣತೆಯನ್ನು ಹೊಂದಿರಲಿಲ್ಲ.

ಮೋರ್ ಲ್ಯಾಂಡ್ = ಭೂಮಿಯ ಸರಾಸರಿ ಉತ್ಪಾದನೆಯ ಬಗ್ಗೆ ಏನನ್ನೂ ಹೇಳಿಲ್ಲ.

ಎಸ್.ಆರ್. ಶರ್ಮ = ಶೇರ್ ಖಾನ ನ ಕಂಧಾಯ ಪದ್ದತಿಯಲ್ಲಿ ಅಕ್ಬರನು ಮಾಡಿದ ಮುಖ್ಯವಾದ ಬದಲಾವಣೆ ಯಾವುದೆಂದರೆ ಹಣದ ರೂಪದಲ್ಲಿ ಕಂದಾಯ ವಸೂಲಿ ಮಾಡುವದು.

ವಿ.ಎ.ಸ್ಮಿತ್ =ರಾಜಾ ತೋಡರಮಲ್ಲನ ಈ ನೀತಿಯು ರೈತರಿಂದ ರಾಜ್ಯಕ್ಕಾಗುವ ಅನ್ಯಾಯವನ್ನು ತಪ್ಪಿಸಲು ಕೈಕೊಂಡ ಉಪಾಯ

### ಅಕ್ಬರನ ಕಾಲದ

## ಮನ್‌ಸಬ್‌ದಾರಿ ಪದ್ದತಿ

1. ಪೀಠಿಕೆ.
2. ಅರ್ಥ ಮತ್ತು ನಿರೋಪಣೆ –ಮೂಲ
3. ಲಕ್ಷಣಗಳು.
4. ಮನ್‌ಸಬ್‌ದಾರರ ಕರ್ತವ್ಯಗಳು.
5. ಮನ್‌ಸಬ್‌ದಾರಿ ಪದ್ದತಿಯ ಲಾಭಗಳು.
6. ಮನ್‌ಸಬ್‌ದಾರಿ ಪದ್ದತಿಯ ದೋಷಗಳು.
7. ಉಪಸಂಪಾರ.

**ಪೀಠಿಕೆ** ;- ಸಾಮ್ರಾಟ ಜಾಲಾಲುದ್ದಿನ್ ಮಹಮ್ಮದ್ ಅಕ್ಬರ ತನ್ನ ಬಲಭುಜದಿಂದ ವಿಶಾಲವಾದ ಸಾಮ್ರಾಜ್ಯವನ್ನು ಸ್ಥಾಪಿಸಿದ್ದನು. ವಿಶಾಲವಾದ ಸಾಮ್ರಾಜ್ಯದ ರಕ್ಷಣೆಗೆ ಹಾಗೂ ವ್ಯವಸ್ಥಿತವಾದ ಆಡಳಿತ ನೆಡುಸುವದಕ್ಕಾಗಿ ಬಲಾಢ್ಯವಾದ ಶಿಸ್ತುಬದ್ಧವಾದ ವ್ಯವಸ್ಥಿತವಾದ ಸೈನ್ಯದ ಅವಸ್ಯಕತೆ ಇತ್ತು. ಅಕ್ಬರನು ಸಿಂಹಾಸನಾರೋಹಣದ ಆರಂಬದ ವರ್ಷದಲ್ಲಿ ಸೈನಿಕರ ದಂಗೆಗಳನ್ನು ಎದುರಿಸಬೇಕಾಯಿತು. ಕ್ರಿ.ಶ. 1571 ರಲ್ಲಿ ಸಾಮ್ರಾಜ್ಯದ ಸೈನ್ಯದಲ್ಲಿ ಶಿಸ್ತು, ನಿಷ್ಠೆ, ಸಂಘಟನೆಯನ್ನು ಹೆಚ್ಚಿಸಲು ಅಕ್ಬರನು ಕೈಕೊಂಡ ಕ್ರಮವೇ "ಮನಸಬ್ ದಾರಿ ಪದ್ದತಿ " ಎಂದು ಹೆಸರಾಗಿದೆ. ಈ ಪದ್ದತಿಯನ್ನು ಅಕ್ಬರನ ಉತ್ತಾರಾಧಿಕಾರಿಗಳು ಮುಂದುವರಿಸಿದರು. ಈ ಪದ್ದತಿಯನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

**ಅರ್ಥ ಮತ್ತು ನಿರೋಪಣೆ –ಮೂಲ** ;- ಮನಸಬ್ ದಾರಿ ಪದ್ದತಿಯು ಮೂಲತಹ ಪರ್ಶಿಯನ್ನರ ಪದ್ದತಿಯಾಗಿತ್ತು. ಈ ಪದ್ದತಿಯ ಜನಕ ಅಕ್ಬರನಾಗಿರದಿದ್ದರೂ ಇತನ ಕಾಲದಲ್ಲಿ ಈ ಪದ್ದತಿಯೂ ವಿಶಾಲವಾಗಿ ಬೆಳೆಯಿತು. "ಮನಸಬ್" ಎಂಬ ಪದವು ಅರೇಬಿಕ್ ಬಾಷೆಯಿಂದ ಬಂದಿದೆ. ಇದು "ಪದವಿ " "ಗೌರವ " ಅಥವಾ "ಅಧಿಕಾರ " ಎಂಬ ಅರ್ಥ ನೀಡುತ್ತದೆ. ಪ್ರತಿಯೊಬ್ಬ ಮನದಬ್

ದಾರನು ತನ್ನ ಪದವಿಗೆ ತಕ್ಕಂತೆ ನಿಗಧಿತ ಸೈನಿಕರನ್ನು ಮತ್ತು ಅಶ್ವಗಳನ್ನು ಹೊಂದಿರಬೇಕಾಗಿತ್ತು. ಈ ಪದವಿಯನ್ನು ಕೇವಲ ಸೈನಿಕರಿಗಲ್ಲದೆ ಉಳಿದ ವಿಭಾಗದಲ್ಲಿ ಸೇವೇ ಸಲ್ಲಿಸುತ್ತಿದ್ದ ನಿಷ್ಠಾವಂತ ಮತ್ತು ಪ್ರಮಾಣಿಕ ನಾಗರಿಕ ಅಧಿಕಾರಿಗಳಿಗೂ ನೀಡಲಾಗುತ್ತಿತ್ತು.

**ಈ ಪದ್ದತಿಯ ಪ್ರಮುಖ ಲಕ್ಷಣಗಳು ;-**

ನೇಮಕಾತಿ;- ಮನಸಬ್ ದಾರರ ನೇಮಕಾತಿ ಸಾಮ್ರಾಟನೇ ಪರಮಾಧಿಕಾರವನ್ನು ಹೊಂದಿದ್ದನು. ಯುದ್ಧರಂಗ, ಆಡಳಿತರಂಗ, ಮತ್ತು ಪಾಂಡಿತ್ಯದಲ್ಲಿ ಪ್ರತಿಭಾನ್ವಿತೆಯನ್ನು ಹೊಂದಿದ್ದ ವ್ಯಕ್ತಿಗಳ ಪಗರಮಾಣಿಕತೆ, ನಿಷ್ಠೆ, ಚತುರತೆ, ಯೊಗ್ಯಅರ್ಹತೆಯ ಆಧಾರ ಮೇಲೆ ಸ್ವತಃ ಬಾದಷಹಾನೇ ನೇಮಕ ಮಾಡಿ ಕೊಳ್ಳುತ್ತಿದ್ದನು.

ದರ್ಜೆ ಮತ್ತು ಬಡ್ತಿ ;- ಅಕ್ಬರನ ಮನಸಬ್‌ದಾರಿ ಪದ್ದತಿಯಲ್ಲಿ, ದರ್ಜೆ ಮತ್ತು ಶ್ರೇಣಿಯ ಬಗ್ಗೆ ವಿಬಿನ್ನ ಅಭಿಪ್ರಾಯಗಳಿವೆ. ಆದರೂ ಪ್ರಮುಖವಾಗಿ ಐದು ದರ್ಜೆಗಳನ್ನು ಇತಿಹಾಸಕಾರರು ಗುರುತಿಸಿದ್ದಾರೆ. ಆ ದರ್ಜೆಗಳು ಅವನು ಹೊಂದಿದ ಸೈನ್ಯ ಮತ್ತು ಅಶ್ವಗಳ ಸಂಖ್ಯೆಯನ್ನು ಅವಲಂಬಿಸಿತ್ತು.

10 ರಿಂದ 100 ಸೈನಿಕರನ್ನು ಹೊಂದಿದ ಸರದಾರನನ್ನು ಪ್ರಥಮ ದರ್ಜೆ ಇತನಿಗೆ ಮನಸಬ್ ದಾರ

100 ರಿಂದ 500 ಸೈನಿಕರನ್ನು ಹೊಂದಿದ ಸರದಾರನನ್ನು ದ್ವೀತಿಯ ದರ್ಜೆ ಇತನಿಗೆ ಉಮ್ರಾ

500 ರಿಂದ 1000 ಸೈನಿಕರನ್ನು ಹೊಂದಿದ ಸರದಾರನನ್ನು ತೃತೀಯ ದರ್ಜೆ ಇತನಿಗೆ ಉಮರ್-ಏ-ಅಕ್ಬರ್

1000 ರಿಂದ 5000 ಸೈನಿಕರನ್ನು ಹೊಂದಿದ ಸರದಾರನನ್ನು ನಾಲ್ಕನೇ ದರ್ಜೆ ಇತನಿಗೆ ಅಮರ್-ಉಲ್-ಉಮ್ರಾ.

5000 ರಿಂದ 10000 ಸೈನಿಕರನ್ನು ಹೊಂದಿದ ಸರದಾರನನ್ನು ಐದನೇ ದರ್ಜೆ ಇತನಿಗೆ ಅಮರ್-ಉಲ್-ಅಕ್ಬರ್

ಆದರೂ ಬಾದಷಹಾನ ಕುಟುಂಬದವರು 10,000. ರಿಂದ 20,000 ಸೈನಿಕರನ್ನು ಹೊಂದಿದವರಾಗಿದ್ದರು.

ಇವರ ಬಡ್ತಿಯು ಸರದಾರರ ವೈಯಕ್ತೀಕ ಕಾರ್ಯ ವೈಖರಿ, ಅವರ ಸಾಧನೆ, ಅವರ ಪರಾಕ್ರಮ, ಮತ್ತು ಅವರ ವಿಶೇಷ ಪಾಂಡಿತ್ಯವನ್ನು ಗುರುತಿಸಿ, ವಿಶೇಷ ಸಂದರ್ಬಗಳಲ್ಲಿ ಅಂದರೆ ಸಿಂಹಾಸನರೋಹಣ, ವಿಜಯೋತ್ಸವ, ಮದುವೆ, ಮತ್ತು ವಿಶೇಷ ಸಮಾರಂಭದ ಸಮಯದಲ್ಲಿ ಮನಸಬ್ ದಾರರಿಗೆ ಬಡ್ತಿಯನ್ನು ನೀಡಲಾಗುತಿತ್ತು. ಉದಾಹರಣೆಗೆ ಮಾನಸಿಂಗನಿಗೆ 1000 ಸೈನಿಕ ಮನಸಬದಾನಿಂದ 10,000 ಮನಸಬದಾರನಾಗಿಯೂ, ರಾಜಾತೋಡರಮಲ್ ನಿಗೆ 5000 ಮನಸಬದಾರನಿಂದ 10,000 ಮನಸಬದಾರನಾಗಿಯೂ, ಅದರಂತೆ ಬಿರಬಲ್ ನಿಗೆ 500 ಸೈನಿಕರಿಂದ 7000 ಮನಸಬದಾರನಾಗಿ ಬಡ್ತಿ ನೀಡಲಾಯಿತು.

ಸಂಬಳ ;-ಮನಸಬ್ ದಾರರ ಸಂಬಳವು ಅವರು ಹೊಂದಿದ ಜಾಟ್ ಮತ್ತು ಸವಾರ್ರ ಮೇಲೆ ಅವಲಂಬಿತವಾಗಿತ್ತು. ಜಾಟ್ ಮತ್ತು ಸವಾರ ಎಂಬ ಪದದ ಅರ್ಥ ಮನಸಬ್ ದಾರ ಹೊಂದಿದ ಸೈನಿಕರ ಸಂಖ್ಯೆಯನ್ನು ಜಾಟ್ ಎಂತಲೂ ಸವಾರ್ ಅವನು ಹೊಂದಿದ ಅಶ್ವ ಅಥವಾ ಆನೆ ಅಥವಾ ಇತರ ಯುದ್ಧ ಸಾಧನೆಯನ್ನು ಸೂಚಿಸಿತ್ತು. ಉದಾಹರಣೆಗೆ 50 ಸೈನಿಕರ ಮನ್‌ಸಬ್‌ದಾರನಿ 280 ರೂಪಾಯಿಗಳು ಮತ್ತು ಅವನು ಹೊಂದಿದ ಜಾಟ್ ಮತ್ತು ಸವಾರ್ ನಿಗೆ 175 + 105 ರೂಪಾಯಿಯಂತೆ ಅವನ ಸಂಬಳ ನಿಗಧಿಮಾಡಲಾಗುತಿತ್ತು.

50 ಜಾಟ್ ಮತ್ತು ಸವಾರ್ ಮನ್‌ಸಬ್‌ದಾನಿಗೆ 280 + 175 + 105 = 560

500 ಜಾಟ್ ಮತ್ತು ಸವಾರ್ ಮನ್‌ಸಬ್‌ದಾನಿಗೆ 2800 + 1750 + 1050 = 5600

5000 ಜಾಟ್ ಮತ್ತು ಸವಾರ್ ಮನ್‌ಸಬ್‌ದಾನಿಗೆ 28000 + 17500 + 10500 = 56000

ಮನ್‌ಸಬ್‌ದಾರನು ಆ ಕಾಲದ ವಸ್ತುಗಳ ಬೆಲೆಗಳನ್ನು ಆದಾರವಾಗಿಟ್ಟು ಕೊಂಡು ನೋಡಿದಾಗ ಅವರ ಸಂಬಳ ಬಹಳ ಹೆಚ್ಚಾಗಿತ್ತು (ಆಗ 20 ರೂ. ಗೆ 1 ತೊಲೆ ಬಂಗಾರ) ಇದರಿಂದ ಇವರು ಅತ್ಯಂತ ಶ್ರೀಮಂತ ವೈಭವದ ಜೀವನ ನಡೆಸುತಿದ್ದರು.

**ನಿವೃತ್ತಿ ;-** ಮನ್‌ಸಬ್‌ದಾರರು ತಮ್ಮ ಶಕ್ತಿ, ಸಾಮರ್ಥ್ಯ ಮತ್ತು ವಿವೇಚನ ಇರುವವರೆಗೆ ಮಾತ್ರ ಅಧಿಕಾರದಲ್ಲಿ ಮುಂದುವರಿಯುತ್ತಾರೆ. ವಯಸ್ಸಾದಾಗ, ಶಕ್ತಿ ಕುಂದಿದಾಗ, ವಿವೇಚನಾಸಾಮರ್ಥ್ಯ ಕಳೆದು ಕೊಂಡಾಗ ನಿವೃತ್ತಿ

ಹೊಂದಬೇಕಾಗುತ್ತಿತ್ತು. ರಾಜ್ಯಕ್ಕೆ ಮತ್ತು ಸಾಮ್ರಾಟನಿಗೆ ದ್ರೋಹ ಬಗೆದಾಗ, ಹಣೆಗಾರಿಕೆಯಲ್ಲಿ ವಿಫಲರಾದಗ ಬಾದ್‌ಷಹಾನೇ ಅವರಿಗೆ ನಿವೃತ್ತಿಯನ್ನು ಘೋಷಿಸುತ್ತಿದ್ದನು.

**ಚಹರೆ ದಾಕಲಾತಿ & ಹಾಜರಾತಿ.;-** ಮನ್‌ಸಬ್‌ದಾರನು ತಾನು ಹೊಂದಿದ ಪ್ರತಿ ಸೈನಿಕರ ವಯಸ್ಸು, ಮುಖ ಚಹರೆ, ದೇಹದ ಮೇಲಿರುವ ಗುರುತು ಮತ್ತು ಮಚ್ಚೆಗಳನ್ನು ದಾಖಲಿಸಬೇಕಾಗಿತ್ತು. ಯುದ್ಧದ ಸಂದರ್ಭದಲ್ಲಿ ಅಥವಾ ತರಬೇತಿಯ ಸಮಯದಲ್ಲಿ ಚಕ್ರವರ್ತಿ ಅಥವಾ ಕೇಂದ್ರದ ಅಧಿಕಾರಿಗಳು ಹಾಜರಾತಿ ತಗೆದುಕೊಳ್ಳುವ ಪದ್ಧತಿ ರೂಡಿಯಲ್ಲಿತ್ತು.

**ದಾಗ್ ಪದ್ದತಿ ;-**ಕುದರೆಗಳಿಗೆ ಅಥವಾ ಆನೆಗಳಿಗೆ ಮುದ್ರೆ ಹಾಕುವ ಪದ್ದತಿಯನ್ನು ದಾಗ್ ಪದ್ದತಿ ಎಂದು ಕರೆಯುತ್ತಾರೆ. ಇದಕ್ಕಾಗಿಯೇ ಪ್ರತ್ಯೇಕ ಇಲಾಖೆ “ದಾಗ್ ಮಹೇಲಿ ” ಎಂಬುವದಿತ್ತು. ಇಲ್ಲಿ ಅಶ್ವ ಅಥವಾ ಆನೆಯ ಬಲತೋಡೆಯ ಮೇಲೆ ಕೇಂದ್ರ ಸರಕಾರದ ಮುದ್ರೆ, ಎಡ ತೋಡೆಯ ಮೇಲೆ ಮನ್‌ಸಬ್‌ದಾನ ಗುರುತಿರುವ ಮುದ್ರೆ ಹಾಕಲಾಗುತ್ತಿತ್ತು. ಎಕೆಂದರೆ ದೂರುಗಳು ಬಂದಾಗ, ಮತ್ತು ಯುದ್ಧಗಳ ಸಂದರ್ಬಗಳಲ್ಲಿ ದಾಖಲೆಯಲ್ಲಿರುವಂತೆ ತಪಾಷಣೆ ಮಾಡಲಾಗುತ್ತಿತ್ತು.

**ಮನಸಬ್‌ದಾರರ ಕರ್ತವ್ಯಗಳು ;-**

1. ಪ್ರತಿ ಮನ್‌ಸಬ್‌ದಾರನು ಸೈನಿಕ ಮತ್ತು ನಾಗರೀಕ ಆಡಳಿತದ ಅಧಿಕಾರವನ್ನು ಹೊಂದಿದ್ದನು.
2. ಮನ್‌ಸಬ್‌ದಾರನ ಕರ್ತವ್ಯಗಳ ಬಗ್ಗೆ ಯಾವುದೇ ಲಿಖಿತ ಶಾಸನವಿರಲಿಲ್ಲ.
3. ಕಂದಾಯ ವಸೂಲಿಯಲ್ಲಿ ಸಹಾಯ, ಸೈನಿಕರನ್ನು ಸಂಗ್ರಹಿಸುವದು.
4. ಯುದ್ಧದ ಸಂದರ್ಬದಲ್ಲಿ ತನ್ನ ಸೈನ್ಯ ಸಮೇತನಾಗಿ ಬಾಗವಹಿಸುವದು.
5. ರಾಜಧಾನಿಯಲ್ಲಿರುವ ಮನ್‌ಸಬ್‌ದಾರ ಪ್ರತಿದಿನ ದೂರದ ಪ್ರಾಂತದಲ್ಲಿರುವವರು ತಿಂಗಳಿಗೆ ಎರಡು ಬಾರಿ, ಮತ್ತು ರಾಜಧಾನಿಯಿಂದ ಅತಿದೂರ ಇರುವ ಮನ್‌ಸಬ್‌ದಾರ ತಿಂಗಳಿಗೆ ಒಂದು ಬಾರಿ ಕಡ್ಡಾಯವಾಗಿ ಚಕ್ರವರ್ತಿಯ ದರ್ಶನ ಪಡೆಯಬೇಕು.
6. ಚಕ್ರವರ್ತಿಯ ದರ್ಶನ ಪಡೆಯುವ ಸಂದರ್ಬದಲ್ಲಿ ಕಪ್ಪುಕಾಣಿಕೆ ಮತ್ತು ವಿಶೇಷ ಉಡುಗರೆಯನ್ನು ಸಲ್ಲಿಸಬೇಕಾಗಿತ್ತು.

**ಮನ್‌ಸಬ್‌ದಾರ ಪದ್ದತಿಯ ಲಾಭಗಳು ;-**

1. ಸೈನಿಕ ವ್ಯವಸ್ಥೆಯಲ್ಲಿ ಸುಧಾರಣೆ.
2. ಚಕ್ರವರ್ತಿಗೆ ವಿಧೇಯತೆ.
3. ಸೈನ್ಯದ ದಕ್ಷತೆಯಲ್ಲಿ ಹೆಚ್ಚಳ.
4. ಸೈನ್ಯದ ವ್ಯವಸ್ಥೆಯಲ್ಲಿ ಶಿಸ್ತು.
5. ಹಿಂದೂಗಳ ಸಂಪೂರ್ಣವಾದ ಸಹಕಾರ.
6. ಸಂಸ್ಕೃತೀಯ ಬೆಳವಣಿಗೆಗೆ ಸಹಕಾರ

**ಮನ್‌ಸಬ್‌ದಾರ ಪದ್ದತಿಯ ದೋಷಗಳು ;-**

1. ದುಬಾರಿ ಸೈನಿಕ ವ್ಯವಸ್ಥೆ.
2. ಕೇಂದ್ರದ ಮಿಸಲಾತಿ ಸೈನ್ಯದ ಅಭಾವ
3. ಸೈನಿಕರು ಸಂಬಳ ಕೊಡುವ ಮನಸಬ್‌ದಾರನಿಗೆ ನಿಷ್ಠರಾಗುತ್ತಿದ್ದರೆ ಹೊರತು ಚಕ್ರವರ್ತಿಗಲ್ಲಾ.
4. ಮನಸಬ್‌ದಾರನಿಗೆ ಕೊಡುವ ದೊಡ್ಡ ಸಂಬಳ ಅವನ ನಿಯತ್ತು ಬದಲಾಯಿಸಬಹುದಿತ್ತು

**ಉಪಸಂವಾರ** ;- ಮನಸಬ್‌ದಾರ ಪದ್ಧತಿಯು ಅಕ್ಬರನ ಕಾಲದಲ್ಲಿ ಸಾಮ್ರಾಜ್ಯದ ವಿಸ್ತರಣೆಯಾಗಿ, ಶಾಂತಿ ಮತ್ತು ಕಾನೂನು ಕಾಪಾಡಿ ಸಾಂಸ್ಕೃತೀಕ ರಂಗದಲ್ಲಿ ಮಹತ್ತರವಾದ ಬೆಳವಣಿಗೆ ತಂದಿತು. ಆದರೆ ಇದರಲ್ಲಿರುವ ಪ್ರಮುಖ ದೋಷಗಳಿಂದ ಮುಂದಿನ ಅಸಮರ್ಥ ಉತ್ತರಾದಿಕಾರಿಗಳ ಕಾಲದಲ್ಲಿ ಸಾಮ್ರಾಜ್ಯದ ಅವತಿಗೆ ಕಾರಣವಾಯಿತು.

## ಅಕ್ಬರನ ಧಾರ್ಮಿಕ ನೀತಿ

1. ಪೀಠಿಕೆ.
2. ಪ್ರೇರಕ ಅಂಶಗಳು.
3. ನಿರೂಪಣೆಯ ಮೂರು ಹಂತಗಳು
   - ಪ್ರಥಮ ಹಂತ 1556 -1579
   - ದ್ವಿತಿಯ ಹಂತ 1579-1582
   - ತೃತೀಯ ಹಂತ 1582-1605
4. ಉಪಸಂವಾರ

**1.) ಪೀಠಿಕೆ. ;-** ಸಾಮ್ರಾಟ ಅಕ್ಬರನು ತನ್ನ ಸಮಕಾಲಿನ ವಿಶ್ವದ ಶ್ರೇಷ್ಠ ಸಾಮ್ರಾಟರಲ್ಲಿ ಅಗ್ರಗಣ್ಯನಾಗಿ ಮೆರೆದಿದ್ದಾನೆ
ತನ್ನ ಸೈನಿಕ ಸಾಮರ್ಥ್ಯದಿಂದ ವಿಶಾಲ ಭಾರತವನ್ನು ಗೆದ್ದಿದ್ದಾನೆ.
ಭಾರತದಲ್ಲಿ ಏಕರೀತಿಯ ಆಡಳಿತ, ಕಾನೂನು, ನಾಣ್ಯಗಳನ್ನು ತಂದ್ದಿದ್ದಾನೆ.
ಈತನ ಅರ್ಥಪೂರ್ಣವಾದ ಅಭೂತಪೂರ್ವ ಅರ್ಧಶತಮಾನದ ಆಡಳಿತಾವಧಿಯಲ್ಲಿ ಸಾಮಾಜಿಕ ಸ್ಥಿರತೆಗೆ ಹೊಸ ಅದ್ಯಾಯನ ಪ್ರಾರಂಬಿಸಿದನು.
ಅಕ್ಬರನನ್ನು ದಿ ಗ್ರೇಟ್ (ಮಹಾಪುಷ) ಎಂದು ಕರೆಯಲು ಅವನು ಅನುಸರಿಸಿದ ನೀತಿಗಲಾಗಿದ್ದವು.
ಅವನು ಅನುಸರಿಸಿದ ಧಾರ್ಮಿಕ ನೀತಿಗೆ ಅನೇಕ ಪ್ರೇರಕ ಅಂಶಗಳು ಕಾರಣ ವಾಗಿದ್ದವು.
ಅವನು ಅನುಸರಿಸಿದ ವಿಶಷ್ಟವಾದ ಜಾತ್ಯಾತೀತ ಧಾರ್ಮಿಕ ನೀತಿಯಿಂದಲೇ ಅವನನ್ನು ದಿ ಗ್ರೇಟ್ ಎಂದು ಕರೆಯಲಾಗಿದೆ.

**2.) ಪ್ರೇರಕ ಅಂಶಗಳು.;-** ಅಕ್ಬರನ ಉದಾರವಾದ ಮತ್ತು ವಿಲಾಶವಾದ ಧಾರ್ಮಿಕ ನೀತಿಯನ್ನು ರೂಪಿಸುವಲ್ಲಿ ಅನೇಕ ಸಂಗತಿಗಳು ಮತ್ತು ಅನೇಕ ಅಂಶಗಳು ಅವನಿಗೆ ಪ್ರೇರಣೆ ನೀಡಿದ್ದವು. ಅವುಗಳು ಈ ಕೇಳಗಿನಂತಿವೆ.

1.) ತಂದೆ-ತಾಯಿಯವರ ಪ್ರಭಾವ ;- ಅಕ್ಬರನ ತಂದೆ ಹುಮಾಯೂನ ಸುನ್ನಿ ಪಂಗಡಕ್ಕೆ ಸೇರಿದ ಮುಸ್ಲೀಮನಾಗಿದ್ದನು. ಅವನ ತಾಯಿ ಹಮೀದಾಬಾನು ಬೇಗಮ್‌ಳು ಷಿಯಾ ಪಂಗಡಕ್ಕೆ ಸೇರಿದವಳಾಗಿದ್ದಳು. ಹುಮಾಯೂನನು ನಿರ್ಗತಿಕನಾಗಿ, ಅಲೆಮಾರು ಜೀವನ ನಡೆಸುತ್ತಿದ್ದಾಗ, ಅವನೀಗೆ ಸಹಾಯ ಮಾಡಿದವನು ಪರ್ಶಿಯಾದ ಚಕ್ರವರ್ತಿಯು ಶಿಯಾ ಧರ್ಮದವನಾಗಿದ್ದನು. ಅದೇ ರೀತಿ ಅವನ ರಕ್ಷಕ ಮತ್ತು ಆತ್ಮೀಯ ಮಿತ್ರ ಭೈರಮ್‌ಖಾನ ಸಹ ಶಿಯಾ ಪಂಗಡಕ್ಕೆ ಸೇರಿದವನಾಗಿದ್ದನು.

2.) ಹುಟ್ಟಿದ ಮತ್ತು ಬೆಳದ ಪರಿಸರದ ಪ್ರಭಾವ :- ಅಕ್ಬರನು ಹುಟ್ಟಿದ್ದು ರಜಪೂತರ ಅರಸ ವೀರಸಾಲನ ಅಮರಕೋಟೆಯಲ್ಲಿ ಜನಿಸಿದನು. ಇದರಿಂದ ಹಿಂದು ರಜಪೂತರ ಸಂಪ್ರದಾಯಗಳ ಪ್ರಭಾವ ಬಾಲಕ ಅಕ್ಬರನ ಮೇಲೆ ಆಗಿರಬೇಕು.

3.) ವಿದ್ಯ ಕಲಿಸಿದ ಉಸ್ತಾದರ ಮತ್ತು ಸ್ನೇಹಿತರ ಪ್ರಭಾವ ;- ಅಕ್ಬರನಿಗೆ ಶಿಕ್ಷಣ ಕಲಿಸಿದ ಉಸ್ತಾದ "ಅಬ್ದುಲ್ ಲತೀಫ್" ಸೂಫಿ ಸಂತನಾಗಿದ್ದು " ಸುಲ್-ಎ-ಕುಲ್" "ಸರ್ವರೊಡನೆ ಶಾಂತಿ" ಎಂಬ ತತ್ವಗಳನ್ನು ಬೋಧಿಸಿದ್ದನು. ಅಷ್ಟೇ ಅಲ್ಲದೇ ಅವನ ಸ್ನೇಹಿತರಾದ ಅಬುಲ್ ಫಜಲ್, ಅಬ್ದುಲ್ ಫೈಜಿ ಸೂಫಿ ತತ್ವಗಳನ್ನು ಪಾಲಿಸುತ್ತಿದ್ದರು. ಇವರ ಪ್ರಭಾವ ಅಕ್ಬರನ ಮೇಲೆ ಆಯಿತು.

4.) ಅಕ್ಬರನ ಹಿಂದೂ ರಜಪೂತರ ರಾಣಿಯರ ಪ್ರಭಾವ ;- ಅಕ್ಬರನ ಧಾರ್ಮಿಕ ನೀತಿಯ ಬೆಳವಣಿಗೆಯಲ್ಲಿ ಹಿಂದು ರಾಣಿಯ ಪಾತ್ರ ಮಹತ್ವದಾಗಿದೆ. ಅವರಿಗೆ ನೀಡಿದ ಧಾರ್ಮಿಕ ಸ್ವಾತಂತ್ರ್ಯದಿಂದಾಗಿ ಅವರು ಆಚಾರಿಸುತ್ತಿರುವ ಸಂಪ್ರದಾಯಗಳಿಂದ ಅಕ್ಬನಿಗೆ ಹಿಂದೂ ಧರ್ಮದ ಮೇಲೆ ಗೌರವ ಪ್ರೀತಿ ಮತ್ತು ಆಶಕ್ತಿಯನ್ನು ಬಲಪಡಿಸುವಲ್ಲಿ ಪ್ರಭಾವ ಬಿರಿದವು.

**3.) ನಿರೂಪಣೆಯ ಮೂರು ಹಂತಗಳು ;-** ಅಕ್ಬರನ ಸುದೀರ್ಘ ಆಡಳಿತ ಜೀವನದಲ್ಲಿ ನಡೆದ ಘಟನೆಗಳಿಂದ ಅವನ ಧಾರ್ಮಿಕ ನೀತಿಯು ಹಂತ ಹಂತವಾಗಿ ವಿಕಾಶವಾಯಿತು. ಅವನ ಒಟ್ಟಾರೆ ಧಾರ್ಮಿಕ ನೀತಿಯನ್ನು ಹೇಳುವದು ಕಷ್ಟವಾಗುತ್ತದೆ. ಅದ್ದರಿಂದ ಅವನ ಧಾರ್ಮಿಕ ನೀತಿಯು ಹಂತ ಹಂತವಾಗಿ ಬೆಳವಣಿಗೆಯನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

**ಪ್ರಥಮ ಹಂತ 1556** -1579 ;- ಕ್ರಿ. ಶ. 1556 ರಲ್ಲಿ ಅಕ್ಬರನು ಇಸ್ಲಾಂ ಧರ್ಮದ ನಿಷ್ಠಾವಂತ ಪ್ರತಿಪಾದಕನಾಗಿದ್ದನು. ಇಸ್ಲಾಮ್ ಧರ್ಮದ ಪವಿತ್ರ ಗ್ರಂಥಗಳಾದ ಖುರಾನ, ಹದಿಷಾ, ಮತ್ತು ಶರೀಯತ್ ದ ಪ್ರಕಾರ ಪ್ರತಿದಿನ 5 ಬಾರಿ ತಪ್ಪದೇ ಪ್ರಾರ್ಥನೆ ಮಾಡುತಿದ್ದನು. ಮಸೀದಿಗಳನ್ನು ಕಟ್ಟಿಸುವದು, ಮುಸ್ಲೀಮ್ ಸಂತರಿಗೆ, ನಿರ್ಗತಿಕರಿಗೆ ದಾನಧರ್ಮಮಾಡುವದು, ಮಕ್ಕಾಯಾತ್ರೆಗೆ ಹೋಗುವವರಿಗೆ ಸಹಾಯ ಮಾಡುವದು, ಮತಾಂತರ ಕಾರ್ಯದಲ್ಲಿ ನಿರತನಾಗಿರುವದು ಮತ್ತು ಇಸ್ಲಾಂ ಧರ್ಮದ ಬೆಲವಣಿಗೆಗೆ ಎಲ್ಲಾ ರೀತಿಯಿಂದ ಶ್ರಮಿಸುತ್ತಿದ್ದನು. ಆದರೆ 1562 ರಿಂದ ಅಂದರೆ ಹಿಂದೂ ರಜಪೂತ ರಾಜಕುಮಾರಿಯರನ್ನು ವಿವಾಹದ ನಂತರ ಅವರ ಸಂಪರ್ಕದ ಪ್ರಭಾವದಿಂದ ಹಾಗೂ ಸೂಫಿ ಸ್ನೇಹಿತರಾದ ಅಬುಲ್ ಫಜಲ್, ಅಬ್ದುಲ್ ಫೈಜಿಯವರ ಪ್ರಭಾವದಿಂದಾಗಿ ಧಾರ್ಮಿಕ ಉದಾರನೀತಿ, ವಿಶಾಲ ಮನೋಭಾವ ಬೆಳಸಿಕೊಂಡನು ಮತ್ತು ಆಡಳಿತದಲ್ಲಿ ಕೇಲವೂಂದು ಬದಲಾವಣೆ ಮಾಡಿದನು. ಅವು ಈ ಕೆಳಗಿನಂತಿವೆ

**ಯಾತ್ರಿಕರ ಕರ ರದ್ದತಿ** ;- ದೆಹಲಿ ಸುಲ್ತಾನರ ಕಾಲದಿಂದಲೂ ಹಿಂದೂಗಳು ತಮ್ಮ ಪವಿತ್ರ ಯಾತ್ರಾ ಸ್ಥಳಗಳ ಸಂದರ್ಶನಕ್ಕಾಗಿ ಸರಕಾರಕ್ಕೆ ತರಿಗೆ ಕಟ್ಟಬೇಕಾಗುತ್ತಿತ್ತು. ಇದು ಅಕ್ಬರನ ಕಾಲದಲ್ಲಿಯೂ ಮುಂದುವರಿದಿತ್ತು. ಕ್ರಿ. ಶ. 1563 ರಲ್ಲಿ ಅಕ್ಬರನು ಮಥುರದಲ್ಲಿದ್ದಾಗ ಅವನ ಗಮನಕ್ಕೆ ಬಂದಿತು. ಇದು ವ್ಯಕ್ತಿಯ ಧಾರ್ಮಿಕ ಪವಿತ್ರ ಕಾರ್ಯಕ್ಕೆ ವಿಧಿಸುವ ತೆರಿಗೆ ತಪ್ಪೆಂದು ಭಾವಿಸಿ ತಕ್ಷಣವೇ ರದ್ದು ಪಡಿಸಿದನು.

**ಜಿಜಿಯಾ ತೆರಿಗೆ ರದ್ದು ಪಡಿಸಿದ್ದು** ;- ದೆಹಲಿ ಸುಲ್ತಾನರ ಆರಂಭ ಕಾಲದಿಂದಲೂ ಹಿಂದೂಗಳ ಮೇಲೆ ಜಿಜಿಯಾ ಎಂಬ ಧಾರ್ಮಿಕ ತಲೆ ಕಂದಾಯವನ್ನು ಹೇರಲಾಗಿತ್ತು . ಒಂದುವೇಳೆ ತೆರಿಗೆಯನ್ನು ಕೊಡದಿದ್ದಲ್ಲಿ ಇಸ್ಲಾಂ ಧರ್ಮಕ್ಕೆ ಬಲವಂತದಿಂದ ಮತಾಂತರ ಗೋಳಿಸಲಾಗುತ್ತಿತ್ತು. ಕಾಫಿರರಿಂದ ಜಿಜಿಯ ವಸೂಲಿ ಮಾಡುವದು ಇಸ್ಲಾಂ ಧರ್ಮದ ಪವಿತ್ರ ಕಾರ್ಯವೆಂದು ನಂಬಿಸಲಾಗಿತ್ತು. ಇದು ಅಕ್ಬರನ ಕಾಲದವರಿಗೂ ಮುಂದುವರಿದಿತ್ತು. ಆದರೆ ಅಕ್ಬರನು ಮುಸ್ಲಿಮ್ ಉಲೇಮಗಳ ಮತ್ತು ಮೌಲಿಗಳ ಪ್ರಭಲ ವಿರೋಧದ ನಡುವೆಯು ಕ್ರಿ. ಶ. 1564 ರಲ್ಲಿ ಜಿಜಿಯಾ ತೆರಿಗೆಯನ್ನು ರದ್ದು ಪಡಿಸಿದನು.

**ಬಲವಂತದ ಮತಾಂತರ ನಿಷೇಧ** ;- ಇಸ್ಲಾಂ ಅರಸರು ಪ್ರಾರಂಬದಿಂದಲೂ ಯುದ್ಧದಲ್ಲಿ ಸೋತ ಹಿಂದೂ ಅರಸರನ್ನು, ಅವರ ಸಂಬಂಧಿಗಳನ್ನು ಸೈನಿಕರನ್ನೂ ಮತ್ತು ಪ್ರಜೆಗಳನ್ನೂ ಯುದ್ಧ ಕೈದಿಗಳನ್ನಾಗಿ ಮಾಡಿ, ಗುಲಾಮರಂತೆ ನೋಡಿಕೊಳ್ಳುತ್ತಿದ್ದರು. ಅಷ್ಟೇ ಅಲ್ಲದೇಯೇ ಅವರನ್ನ ಬಲತ್ಕಾರದಿಂದ ಇಸ್ಲಾಂ ಧರ್ಮಕ್ಕೆ ಮತಾಂತರಿಸುತ್ತಿದ್ದರು. ಇದನ್ನು ಅಕ್ಬರನು ನಿಷೇಧಿಸಿ, ತನ್ನಿಂದ ಸೋತಂತ ಅರಸರನ್ನು, ಅವರ ಸಂಬಂಧಿಗಳನ್ನು ಸೈನಿಕರನ್ನೂ ಮತ್ತು ಪ್ರಜೆಗಳನ್ನೂ ಗೌರವದಿಂದ ಕಂಡು ಅವರ ಪ್ರೀತಿ ವಿಶ್ವಾಸಗಳನ್ನು ಜಯಸಲು ಅನೇಕ ಕ್ರಮ ಕೈಗೊಂಡನು.

**ಮೊಗಲ್ ಸೇವೆಯಲ್ಲಿ ಹಿಂದೂಗಳ ಸೇರ್ಪಡೆ** ;- ಬಾದಷಹಾ ಅಕ್ಬರನು ಬಹುಸಂಖ್ಯಾತರಾದ ಹಿಂದೂಗಳ ಪ್ರೀತಿ, ವಿಶ್ವಾಸ, ಮತ್ತು ಸಹಕಾರವಿಲ್ಲದೇ ತನ್ನ ಸಾಮ್ರಾಜ್ಯದ ಅಡಿಪಾಯ ಭದ್ರಪಡಿಸುವದು ಸಾದ್ಯವಿಲ್ಲವೆಂದು ಇತಿಹಾಸದಿಂದಲೂ ಮತ್ತು ತನ್ನ ವಿವೇಚನಾ ಶಕ್ತಿಯಿಂದಲೂ ತಿಳಿದಿದ್ದನು. ಸ್ವಾರ್ಥ, ಭ್ರಷ್ಟ, ಉಜ್‌ಬೇಗ ಮತ್ತು ಆಫಘನ್ ಆಧಿಕಾರಿಗಳನ್ನು ಸದೆ ಬಡಿಯಲು ಅಕ್ಬರನು ರಾಜನಿಷ್ಠರಾದ, ರಜಪೂತರನ್ನು ತನ್ನ ಸೈನ್ಯದಲ್ಲಿ ಸೇರಿಸಿ ಕೊಂಡು ಸ್ಥಾನ-ಮಾನ ನೀಡಿದನು. ರಾಜತೋಡರಮಲ್ಲ, ಮಾನಸಿಂಗ್,

ಭಗವನ್ ದಾಸ, ಬೀರಬಲ್ ಇನ್ನೂ ಮುಂತಾದವರಿಗೆ ಮನ್‌ಸಬ್‌ದಾರನ್ನನ್ನಾಗಿ ನೇಮಿಸಿಕೊಳ್ಳವದರಿಂದ ಆಡಳಿತದಲ್ಲಿ ಸ್ಥಿರತೆಯನ್ನು ಸಾಧಿಸಿದನು.

**ಇಬಾದತ್ ಖಾನದ ಸ್ಥಾಪನೆ** ;- ಸೂಫಿ ಸಂತರಾದ ಶೇಖ ಮುಭಾರಕ, ಅಬ್ದುಲ್ ಲತೀಫ್ ಮತ್ತು ಅವರ ಮಕ್ಕಳಾದ ಅಬುಲ್ ಫಜಲ್ ಮತ್ತು ಅಬ್ದುಲ್ ಪೈಜಿಯವರ ಪ್ರಭಾವದಿಂದಾಗಿ ಅಕ್ಬರನಲ್ಲಿ ಧಾರ್ಮಿಕ ವಿಷಯಗಳನ್ನು ತಿಳಿದುಕೊಳ್ಳುವ ದಾಹ ಹೇಚ್ಚಾಯಿತು. ಅದಕ್ಕಾಗಿಯೇ ಹೊಸದಾಗಿ ನಿರ್ಮಿಸಿದ ಫತೆಪುರ ಸಿಕ್ರಿಯಲ್ಲಿ "ಇಭಾದತ್ ಖಾನ" ಎಂಬ ಕಟ್ಟಡವನ್ನು ನಿರ್ಮಿಸಿದನು. ಇಲ್ಲಿ ಧಾರ್ಮಿಕವಿಷಯಗಳ ಚರ್ಚೆ ನಡೆಯುತ್ತಿತ್ತು. ಪ್ರಾರಂಬದಲ್ಲಿ ಮುಸ್ಲಿಮ್ ಧರ್ಮ ಪಂಡಿತರೊಡನೆ ಚರ್ಚಸುತ್ತಿದ್ದ ಅಕ್ಬರನ ನಂತರದಲ್ಲಿ ಇತರ ಧರ್ಮ ಮುಖಂಡರನ್ನು ಇಲ್ಲಿಗೆ ಕರೆಯಿಸಿ ಚರ್ಚಿಸಲಾರಂಬಿಸಿದನು.

ಝೊರೋಸ್ಟ್ರೀಯನ್ ಧರ್ಮ ಪಂಡಿತನಾದ ದಸ್ತೂರ್ ಮೆಹರಜೀ,
ಜೈನಧರ್ಮದ ಮಹಾಮುನಿ ಹೀರಾವಿಜಯಸೂರಿ, ಮತ್ತು ಭಾನುಚಂದ್ರ,
ಹಿಂದೂ ಧರ್ಮದ ಪಂಡಿತ ಪರುಷೋತ್ತಮ.
ಕ್ರೆöÊಸ್ತ ಧರ್ಮದ ಗೋವಾದಿಂದ ಆಂಟೋನಿಯಾ ಮತ್ತು ಆಕ್ವಾನೀವ್
ಸಿಖ್ ಧರ್ಮ ಪಂಡಿತರು ಇಬಾದತ್ ಖಾನದಲ್ಲಿ ಭಾಗವಹಿಸಿದ್ದರು ಹೀಗೆ ಸಾಮ್ರಾಟನು ಇತರ ಧರ್ಮಗಳ ತತ್ವಗಳನ್ನು ತುಂಬು ಹೃದಯದಿಂದ ಆಲಿಸಿ, ಅರಿತುಕೊಳ್ಳುತ್ತಿದ್ದನು

**ದ್ವೀತಿಯ ಹಂತ 1579-1582 ;-** ಇಸ್ಲಾಮ್ ಧರ್ಮದ ಷಿಯಾ ಮತ್ತು ಸುನ್ನಿ ಪಂಥೀಯರ ಧರ್ಮಗುರುಗಳ, ಸಂಕುಚೀತ ಭಾವನೆ, ಆಂತರೀಕ ಕಲಹ, ಪರಸ್ಪರ ದ್ವೇಷ, ಪರಧರ್ಮಗಳ ನಿಂದನೆಗಳನ್ನು ಕಂಡು ಇಸ್ಲಾಂ ಧರ್ಮದ ನಾಯಕತ್ವವನ್ನು ಸ್ವತಃ ತಾನೇ ವಹಿಸಿಕೊಳ್ಳಲು ನಿರ್ಧರಿಸಿದನು. ಅದಕ್ಕಾಗಿ ಇಸ್ಲಾಮ್ ಧರ್ಮದ ಪ್ರಗತಿಗಾಗಿ ಚಕ್ರವರ್ತಿಯ ಆದೇಶದ ಮೇರೆಗೆ ಶೇಖ್ ಮುಬಾರಕ್ ನು "ಇಸ್ಲಾಂ ಧಾರ್ಮಿಕ ವಿಷಯಗಳಲ್ಲಿ ಅಥವಾ ಧರ್ಮ ಪಂಡಿತರಲ್ಲಿ ಭಿನ್ನಾಭಿಪ್ರಾಯಗಳು ತಲೆದೋರಿದಾಗ ಅಂತೀಮ ನಿರ್ಣಯ ಕೊಡುವ ಅಧಿಕಾರ ಬಾದಷಹ ವಹಿಸಿಕೊಳ್ಳಬೇಕು." ಎಂದು ಮನವಿ ಪತ್ರ ನೀಡಿದನು. ಅದರಂತೆ ಕ್ರಿ. ಶ. 1579 ರಲ್ಲಿ ಫತೇಪುರು ಸಿಕ್ರಿಯ ಜಾಮೀಮಸಿದಿಯ ಧರ್ಮೊಪದೇಶದ ಪೀಠವನ್ನು ಹತ್ತಿ ಅಬುಲ್ ಫಜಲ್ ರಚಿದ ಖುತಬಾವನ್ನು ಪಠಿಸಿದನು. ಇದರಿಂದ ಅಕ್ಬರನು ಇಸ್ಲಾಂ ಧರ್ಮದ ಧಾರ್ಮಿಕ ಮುಖಂಡನಾದನು. ಅಂದರೆ "ಧಾರ್ಮಿಕ ವಿಷಯಗಳಲ್ಲಿ, ಧರ್ಮ ಪಂಡಿತರ ಮದ್ಯ ಭಿನ್ನಾಭಿಪ್ರಾಯ ಉಂಟಾದಾಗ ಅಂತೀಮ ತೀರ್ಪು ಕೊಡುವ ಆಧಿಕಾರ" "ಇದು ಖುರಾನಿಗೆ ವಿರೋಧವಾಗದಂತೆ, ರಾಜತ್ವಕ್ಕೆ ಕುಂದು ಬರದಂತೆ ನಿರ್ಣಯ ಕೋಡುವ ಅಧಿಕಾರ" ಇದನ್ನೆ ಸುನಿಶ್ಚಯ ಶಾಸನ ಎಂದು ಕರೆದಿದ್ದಾರೆ. ಹೀಗೆ ಅಕ್ಬರನು ಲೌಕೀಕ ರಾಜಕೀಯದ ಮತ್ತು ಅಲೌಕೀಕ ಧಾರ್ಮಿಕ ಮುಖಂಡನಾದನು.

**ತೃತೀಯ ಹಂತ 1582-1605 ;-** ಮೂರನೇಯ ಹಂತದಲ್ಲಿ ಅಕ್ಬರನಿಗೆ ಇಬಾದತ್ ಖಾನ ಸ್ಥಾಪನೆಯಿಂದಾಗಲಿ, ಸುನೀಶ್ಚಯ ಶಾಸನದ ಅಧಿಕಾರದಿಂದಾಗಲಿ ಇತನ ಧಾರ್ಮಿಕ ಜ್ಞಾನ ದಾಹ ತೀರಲಿಲ್ಲ. ಇದರಿಂದ ಸುಲ್-ಎ-ಕುಲ್ (ಸರ್ವರಿಗೂ ಶಾಂತಿ) ಎಂಬ ಅವನ ಕನಸು ಇಡರಲಿಲ್ಲ ಅದ್ದರಿಂದ ಅವನು ಹೊಸ ಧರ್ಮವನ್ನು ಸ್ಥಾಪಿಸಲು ನಿರ್ಧರಿಸಿದನು. ಫತೇಪುರ ಸಿಕ್ರಿಯಲ್ಲಿ 1582 ರಲ್ಲಿ ತನ್ನ ಅತ್ಯಂತ ನಂಬಿಕಸ್ಥರ ಸಭೆ ಕರೆದು "ದೀನ್-ಎ-ಇಲಾಹಿ" ಅಥವಾ "ತವಹಿದ್-ಎ-ಇಲಾಹಿ ಎಂಬ ಹೊಸ ಧರ್ಮವನ್ನು ಘೋಷಿಸಿದನು. ಮೊದನು ಈ ಧರ್ಮವು ಇಸ್ಲಾಂ ಧರ್ಮದ ಏಕೇಶ್ವರ ತತ್ವದ ಮೇಲೆ ಆಧಾರತವಾಗಿತ್ತಲ್ಲದೆ ಅಬ್ದುಲ್ ಲತೀಪ್ ನ "ಸುಲ್-ಎ-ಕುಲ್" ಅಥವಾ "ಸರ್ವರಿಗೂ ಶಾಂತಿ" ಎಂಬ ನೀತಿಯನ್ನು ಅಳವಡಿಸಿಕೊಂಡಿತ್ತು. ನಂತರದಲ್ಲಿ ಇದು ಸರ್ವಧರ್ಮಗಳ ಉತ್ತಮ ತತ್ವಗಳನ್ನು ಒಳಗೊಂಡಿತು. ಈ ಕೆಳಗಿನಂತೆ ತತ್ವಗಳು ಇದ್ದವು

1. ಸ್ವಾತಂತ್ರ್ಯ ಮತ್ತು ಪರೋಪಕಾರ
2. ಐಹಿಕ ಸುಖ-ಆಸೆಗಳಿಂದ ಮುಕ್ತ
3. ಮೃದುವಾಗಿ, ಸಭ್ಯ ಶಬ್ದಗಳಿಂದ,ಹಿತವಾಗಿ ಮಾತನಾಡುವದು

4. ಸಂಬಂಧಿಕರೊಂದಿಗೆ, ಅಕ್ಕಪಕ್ಕದವರ ಜೋತೆ ಉತ್ತಮವಾಗಿರುವದು.
5. ಏಕೇಶ್ವರನಲ್ಲಿ ಆತ್ಮ ಸಮರ್ಪಣೆ ಮಾಡುವದು.

ಅಬುಲ್ ಫಜಲನು ಈ ಪಂಥದ ಪ್ರಮುಖ ಕಾರ್ಯದರ್ಶಿಯಂತೆ ಕೆಲಸ ಮಾಡಿತ್ತಿದ್ದನು. ಇವನ ಮುಖಾಂತರ ಪ್ರತಿ ರವಿವಾರದಂದು ಚಕ್ರವರ್ತಿಗೆ ಬೆಟಿ ಮಾಡಿ ಹೊಸ ಧರ್ಮವನ್ನು ಸ್ವೀಕರಿಸಬೇಕಾಗಿತ್ತು. ಈ ಕೆಳಗಿನ ಕೇಲವೂ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕಾಗಿತ್ತು.

1. ಸದೈಸ್ಯನಾಗ ಬಯಸುವವನು ಯಾರ ಒತ್ತಡಕ್ಕೆ ಅಥವಾ ಅಭಿಮಾನಕ್ಕೆ ಕಟ್ಟುಬಿದ್ದು ಬರಬಾರದು.
2. ಈ ಧರ್ಮ ಸೇರಬೇಕಾದವನು ಮೊದಲು ಅಬುಲ್ ಫಜಲ್ ನ ಮೂಲಕ ಚಕ್ರವರ್ತಿಗೆ ಬೆಟ್ಟಿ ಮಾಡಿ, ರುಮಾಲನ್ನು ಚಕ್ರವರ್ತಿಯ ಪಾದದಡಿ ಇಟ್ಟು ಸಿಶ್ತಾ ಮಾಡಬೇಕು.
3. ಚಕ್ರವರ್ತಿಯಿಂದ "ಅಲ್ಲಾ-ಹು-ಅಕ್ಬರ್ " ಎಂದು ಬರೆದಿರುವ "ಶಸ್ತ್ " ಎಂಬ ಸಂಕೇತವನ್ನು ಪಡೆದು ತನ್ನ ರುಮಾಲಿನ ಮೇಲೆ ಧರಿಸಬೇಕು.
4. ಒಬ್ಬ ಸದ್ಯಸ್ಯ ಇನ್ನೊಬ್ಬ ಸದ್ಯಸ್ಯನನ್ನು ಬೆಟ್ಟಿ ಮಾಡಿದಾಗ "ಅಲ್ಲಾ-ಹೂ-ಅಕ್ಬರ್ " ಎಂದು ಒಬ್ಬರನೊಬ್ಬರು ಆಲಂಗಿಸಿ ಪರಸ್ಪರ ವಿಚಾರ-ವಿನಿಮಯ ಮಾಡಿಕೊಳ್ಳಬೇಕು.
5. ಸದ್ಯಸ್ಯನಾದವನು ತನ್ನ ಹುಟ್ಟು-ಹಬ್ಬವನ್ನು ಭೋಜನ ಕೂಟವನ್ನು ಏರ್ಪಡಿಸಿ ವೈಭವದಿಂದ ಆಚಾರಿಸಿಕೊಳ್ಳಬೇಕು.
6. ಹುಟ್ಟು-ಹಬ್ಬದ ತಿಂಗಳು ಮೌಂಸಹಾರವನ್ನು ಸ್ವೀಕರಿಸಬಾರದು.
7. ತನ್ನ ಆಸ್ತಿ, ಪ್ರಾಣ, ಗೌರವ, ಮತ್ತು ಧರ್ಮವನ್ನು ತ್ಯಾಗ ಮಾಡಬೇಕು.

ಅಕ್ಬರನು ಯಾರನ್ನು ಬಲವಂತವಾಗಿ ಈ ಧರ್ಮಕ್ಕೆ ಸೇರಿಸಲಿಲ್ಲ. ಇದರಿಂದ ಈ ಧರ್ಮದ ಸದಸ್ಯರ ಸಂಖ್ಯೆ ತುಂಬಾ ಕಡಿಮೆಯಾಗಿತ್ತು. ಪ್ರಮುಖ ರಜಪೂತ ನಾಯಕರಾದ ರಾಜಾ ಭಗವಾನದಾಸ ಮತ್ತು ಮಾನಸಿಂಗ್‌ರು ಈ ಪಂಥದ ಸದಸ್ಯರಾಗಿರಲಿಲ್ಲ, ಬೀರಬಲ್ಲನು ಮಾತ್ರ ಈ ಪಂಥದ ಪ್ರಮುಖ ಸದಸ್ಯನಾಗಿದ್ದನು.

**ವಿಮರ್ಶೆ ;- 1**.) ಬದಾಯುನಿ ಎಂಬ ಸಮಕಾಲಿನ ಇತಿಹಾಸಕಾರನು ಅಕ್ಬರನ ಈ ನೀತಿಯನ್ನು ಖಂಡಿಸಿದ್ದಾನೆ. ಇವನು ಅಕ್ಬರನು ಇಸ್ಲಾಂ ಧರ್ಮದ ವಿರೂದ್ಧದ ಕ್ರಮವೆಂದು ಈ ಹೊಸ ಧರ್ಮವನ್ನು ಟೀಕಿಸಿದ್ದಾನೆ. (ಬದಾಯುನಿಗೆ ಬಡ್ತಿ ನೀಡದೇ ಇದ್ದರಿಂದ ಹೀಗ ಹೇಳಿದ್ದಾನೆ ಎಂದು ಕೇಲವರ ವಾದ)

2.) ವಿ.ಎ. ಸ್ಮಿಥ್ ರು "ಈ ನೀತಿಯು ಸಾಮ್ರಾಟನ ಹಾಸ್ಯಾಸ್ಪದವಾದ, ದುರಾಭಿಮಾನದ ಫಲಿತಾಂಶವಾಗಿದ್ದು , ದೀನ್-ಎ-ಇಲಾಹಿ ಯು ಅಕ್ಬರನ ಮೂರ್ಖತನದ ಕ್ರಮವಾಗಿತ್ತು "

**ಅಕ್ಬರನ ರಜಪೂತ ನೀತಿ**

1. ಪೀಠಿಕೆ
2. ಅರ್ಥ- ನಿರೂಪಣೆ
3. ಕಾರಣಗಳು.
4. ಲಕ್ಷಣಗಳು.
5. ಪರಿಣಾಮಗಳು ಮತ್ತು ಮಹತ್ವ.
6. ಉಪಸಂಹಾರ.

**1.) ಪೀಠಿಕೆ ;-** ಸಾಮ್ರಾಟ ಅಕ್ಬರನು ಅನುಸರಿಸಿದ ರಜಪೂತ ನೀತಿಯಿಂದ ತನ್ನ ಸಮಕಾಲಿನ ವಿಶ್ವದ ಶ್ರೇಷ್ಠ ಸಾಮ್ರಾಟರಲ್ಲಿ ಅಗ್ರಗಣ್ಯನಾಗಿ ಮೆರೆದಿದ್ದಾನೆ ಹಾಗೂ ವಿಶಾಲ ಭಾರತವನ್ನು ಗೆದ್ದಿದ್ದಾನೆ. ಮತ್ತು ಭಾರತದಲ್ಲಿ ಏಕರೀತಿಯ ಆಡಳಿತ, ಕಾನೂನು, ನಾಣ್ಯಗಳನ್ನು ತಂದ್ದಿದ್ದಾನೆ.

ಈತನ ಅರ್ಥಪೂರ್ಣವಾದ ಅಭೂತಪೂರ್ವ ಅರ್ಧಶತಮಾನದ ಆಡಳಿತಾವಧಿಯಲ್ಲಿ ಸಾಮಾಜಿಕ ಸ್ಥಿರತೆಗೆ ಹೊಸ ಅದ್ಯಾಯನ ಪ್ರಾರಂಬಿಸಿದನು.

ಅವನು ಅನುಸರಿಸಿದ ವಿಶಷ್ಟವಾದ ಜಾತ್ಯಾತೀತ ರಜಪೂತ ನೀತಿಯಿಂದಲೇ ಅವನನ್ನು ದಿ ಗ್ರೇಟ್ ಎಂದು ಕರೆಯಲಾಗಿದೆ.

**2.) ಅರ್ಥ- ನಿರೂಪಣೆ.** ;-ಹಿಂದೂಸ್ತಾನದಲ್ಲಿ ತನ್ನ ಆಧಿಕಾರವನ್ನು ಭದ್ರ ತಳಹದಿಯ ಮೇಲೆ ನಿಲ್ಲಿಸಲು ಬಹುಸಂಖ್ಯಾತರಾದ ಹಿಂದುಗಳ ಸಹಾಯ, ಸಹಕಾರ, ಮತ್ತು ಸಹಾನುಭೂತಿ ಪಡೆಯುವದಾಗಿತ್ತು. ಇದಕ್ಕಾಗಿ ಕ್ಷಾತ್ರತೇಜ, ಶೌರ್ಯ, ಪ್ರತಾಪ, ರಾಷ್ಟ್ರ ಪ್ರೇಮ ಮತ್ತು ರಾಜನಿಷ್ಠಗೆ ಹೆಸರುವಾಸಿಯಾಗಿದ್ದ ರಜಪೂತರ ಹೃದಯ ಮನಸ್ಸು ಗೆಲ್ಲುವದು. ಇದಕ್ಕಾಗಿ ರಾಜಕೀಯ ಹಿತಾಶಕ್ತಿ, ನ್ಯಾಯ ಮತ್ತು ಸಮಾನ ಭಾವನೆಯ ತಳಹದಿಯ ಮೇಲೆ ಕಾರ್ಯರೂಪಿಸುವದೇ ಅವನ ರಜಪೂತ ನೀತಿಯಾಗಿತ್ತು.

**3.) ಕಾರಣಗಳು. ;-**

I) ಬೆಳೆದ ಪರಿಸರ ಮತ್ತು ತಂದೆ-ತಾಯಿರ ಸ್ವಭಾವ :- ಹುಮಾಯೂನನು ನಿರ್ಗತಿಕನಾಗಿ, ಅಲೆಮಾರು ಜೀವನ ನಡೆಸುತ್ತಿದ್ದಾಗ ರಜಪೂತರ ರಾಣಾ ವೀರಸಾಲನು ಅಮರಕೋಟೆಯಲ್ಲಿ ಆಶ್ರಯ ನೀಡಿದ್ದು, ಅಲ್ಲಿ ಅಕ್ಬರನು ಹುಟ್ಟಿದ್ದು ರಜಪೂತರ ಲಾಲನೆ- ಪಾಲನೆ ಮತ್ತು ಹಿಂದು ಸಂಪ್ರದಾಯಗಳ ಪ್ರಭಾವ ಬಾಲಕ ಅಕ್ಬರನ ಮೇಲೆ ಆಗಿರಬೇಕು.

II) ಸೂಫಿ ಸಂತರ ಪ್ರಭಾವ :- ಅಕ್ಬರನಿಗೆ ಶಿಕ್ಷಣ ಕಲಿಸಿದ ಉಸ್ತಾದ "ಅಬ್ದುಲ್ ಲತೀಫ್" ಸೂಫಿ ಸಂತನಾಗಿದ್ದು " ಸುಲ್-ಎ-ಕುಲ್" "ಸರ್ವರೊಡನೆ ಶಾಂತಿ" ಎಂಬ ತತ್ವಗಳನ್ನು ಬೋಧಿಸಿದ್ದನು. ಅಷ್ಟೇ ಅಲ್ಲದೇ ಅವನ ಸ್ನೇಹಿತರಾದ ಅಬುಲ್ ಫಜಲ್, ಅಬ್ದುಲ್ ಫೈಜಿ ಸೂಫಿ ತತ್ವಗಳನ್ನು ಪಾಲಿಸುತ್ತಿದ್ದರು. ಇವರ ಪ್ರಭಾವ ಅಕ್ಬರನ ಮೇಲೆ ಆಯಿತು.

III) ತನ್ನವರೇ ಆದ ಮುಸ್ಲೀಂ ಸಂಬಂಧಿಗಳ ದ್ರೋಹಗಳು ;- ತನ್ನನ್ನು ಬೆಳಿಸಿ, ಮಾರ್ಗದರ್ಶನ ನೀಡಿದ ಭೈರಮ್ ಖಾನನ ಸ್ವಾರ್ಥ ಬಂಡಾಯ. ತನ್ನನ್ನು ಸಾಕಿ ಬೆಳಸಿದ ಸಾಕುತಾಯಿ ಅನಗಾ ಮತ್ತು ಅವಳ ಮಗ ಅದಮ್ ಖಾನರ ಸ್ವಾರ್ಥಮಯ ದುರ್ನಡತೆ, ಸಹೋದರ ಸಂಬಂದಿಗಳಾದ ಮಿರ್ಜಾಗಳ, ಉಜ್ಜಬೇಗರ ವಿದ್ರೋಹಗಳು. ಷಿಯಾ ಮತ್ತು ಸುನ್ನಿ ಪಂಥೀಯರ ಪರಸ್ಪರ ದ್ವೇಷ, ಪರಧರ್ಮಗಳ ನಿಂದನೆಗಳು.

IV) ಇತಿಹಾಸದ ಪ್ರಭಾವ. ;-

- ಗುಲಾಮರ ಕಾಲದಿಂದ ಹಿಡಿದು ಅವರ ಅವನತಿಯವರೆಗೆ –ದೆಹಲಿ ಸುಲ್ತಾನರು ರಜಪೂತರ ವಿರುದ್ಧ ಅನೇಕ ಯುದ್ಧಗಳನ್ನು ಮಾಡಿದ್ದರೂ, ರಜಪೂತರ ಸಂಖ್ಯೆಯೇನು ಕಡಿಮೆ ಯಾಗಲಿಲ್ಲದಿರುವದು.
- ಬಲ್ಬನ್, ಅಲ್ಲಾವೂದ್ದಿನ್ ಖಿಲ್ಜಿ , ಮಹಮ್ಮದ್ದ ಬಿನ್ ತಘಲಕ್ ರು ರಜಪೂತರನ್ನು ಅನೇಕ ಭಾರಿ ಸೋಲಿಸಿದ್ದರು, ಆ ಸೋಲು ಅವರಿಗೆ ಕ್ಷಣಿಕದಾಗಿದ್ದು ಅವರು ಕುಗ್ಗದಯೇ ಪುನಃ ಕೇಲವೇ ದಿನಗಳಲ್ಲಿ ತಮ್ಮ ರಾಜ್ಯವನ್ನು ಪಡೆಯುತ್ತಿದ್ದರು.
- ಜಿಜಿಯಾ, ಯಾತ್ರಿಕರ ತೆರಿಗೆ, ದೇವಾಲಯಗಳ ನಾಶ, ಬಲತ್ಕಾರದ ಮತಾಂತರ, ಹೀಗೆ ಅವರ ಮೇಲೆ ನಿರಂತರ ಶೋಷಣೆ ಕೃತ್ಯ ಎಸಗಿದ್ದರೂ ಅವರನ್ನು ಬಗ್ಗಿಸಲಾಗಿರಲಿಲ್ಲ.
- ಅಲ್ಲಾವೂದ್ದಿನ್ ಖಿಲ್ಜಿ ಮತ್ತು ಇತರ ಅಫಘನ್ ಸರದಾರರೂ ರಜಪೂತರೋಡನೆ ವೈವಾಹಿಕ ಸಂಬಂದ ಏರ್ಪಡಿಸಿದ್ದರು ಅದು ಪ್ರೀತಿ, ವಿಶ್ವಾಸ, ಸಹಕಾರ, ಮತ್ತು ಸಮಾನತೆಯ ತಳಹದಿಯನ್ನು ಹೊಂದಿರಲಿಲ್ಲ
- ಬಾಬರನು ಮತ್ತು ರಾಣಾ ಸಂಗ್ರಮ್ ಸಿಂಗ್ ರಪ್ರಾರಂವಾದ ಸ್ನೇಹ –ಒಪ್ಪಂದಗಳು ನಂತರ ಮುಂದುವರಿಯಲಿಲ್ಲ.
- ಹುಮಾಯೂನ್ನ ರಾಣಿ ಕರ್ಣಾವತಿಯ ಜೋತೆ ಅನುಸರಿಸಿದ ತಟಸ್ಥ ನೀತಿ

➢ ಹುಮಾಯೂನ್ ಸಾಮ್ರಾಜ್ಯ ಕಳೆದುಕೊಂಡು ಅಲೇಮಾರು ಜೀವನ ನಡೆಸುತ್ತಿದ್ದಾಗ ಅವನ ಸಹೋದರರೆ ದ್ರೋಹ ಬಗೆದರು, ಆದರೆ ಅವನಿಗೆ ಆಶ್ರಯ ನೀಡಿದ್ದು ರಜಪೂತರೇ ಆಗಿದ್ದರು.

V) ರಜಪೂತರ ರೀತಿ ನೀತಿ ಮತ್ತು ಸಂಪ್ರದಾಯಗಳು. **;-**ರಜಪೂತರ ವೀರತ್ವ, ಅವರ ಸ್ವಾಮಿನೀಷ್ಠೆ, ಅವರ ಅಚಲವಾದ ದೇಶಪ್ರೇಮ, ರಾಜಭಕ್ತಿ, ಧೃಡವಾದ ಆತ್ಮವಿಶ್ವಾಸ, ಇವೂ ಅಕ್ಬರನ ಮೇಲೆ ಪ್ರಭಾವ ಬಿರಿದ್ದವು. ಅವರ ಹಬ್ಬ-ಹರಿದಿನಗಳು, ಅವರ ಧಾರ್ಮಿಕ ಆಚಾರಣೆಗಳು, ಅವರ ಸ್ನೇಹ , ಧಾರ್ಮಿಕ ನಂಬಿಕೆಗಳು, ಅವರ ಅತಿಥಿ ಸತ್ಕಾರ, ಅವರ ತ್ಯಾಗ ಮನೋಭಾವಗಳಿಗೆ ಅಕ್ಬರನು ಮನಸೋತಿದ್ದನು.

**4.) ರಜಪೂತ ನೀತಿಯ ಲಕ್ಷಣಗಳು. ;-**

1.) ವೈವಾಹಿಕ ಸಂಬಂಧಗಳು.

1.) ಅಂಬರದ ರಾಜಾ ಬಿಹಾರಿಮಲ್ಲನ ಮಗಳನ್ನು

2.) ಬಿಕನೇರ್ ದ ರಾಜಾ ಕಲ್ಯಾಣ ಮಲ್ಲನ ಮಗಳು.

3.) ಜೈಸಲ್ ಮೇರ್ ದ ರಾಜಾ ಹರರಾಯ (ಭಿಮಸಿಂಗ್) ಮಗಳನ್ನು

4.) ರಾಜಾ ಭಗವಾವ ದಾಸ ನ ಮಗಳನ್ನು ರಾಜಕುಮಾರ ಸಲೀಮನಿಗೆ

- ಹಿಂದೂ ರಾಣಿಯರಿಗೆ ನೀಡಿದ ಸಂಪೂರ್ಣ ಧಾರ್ಮಿಕ ಸ್ವಾತಂತ್ರ್ಯ.
- ಹಿಂದೂ ಸಂಬಂದಿಗಳಿಗೆ ನೀಡಿದ ಗೌರವ- ಸತ್ಕಾರಗಳು.
- ಹಿಂದೂ ಗಳು ಆಚಾರಿಸುವ ಧಾರ್ಮಿಕ ಹಬ್ಬ ಹರಿದಿನಗಳ ಕಾರ್ಯದಲ್ಲಿ ಭಾಗಿಯಾಗಿದ್ದು

11.) ಮೊಘಲರ ಸೇವೆಯಲ್ಲಿ ರಜಪೂತರ ಸೇರ್ಪಡೆ. ;- ರಜಪೂತರ ವೀರತ್ವ, ಅವರ ಸ್ವಾಮಿನೀಷ್ಠೆ, ಸಾಹಸ, ಸೈನೀಕ ಸಾಮರ್ಥ್ಯ, ಯುದ್ಧ ಕೌಸಲ್ಯಗಳನ್ನು ಚನ್ನಾಗಿ ಅರ್ಥಮಾಡಿಕೊಂಡು ಅವರ ಯೋಗ್ಯತೆಗೆ ತಕ್ಕ ಹುದ್ದೆಯನ್ನು ನೀಡಿದ್ದು '

ರಾಜಾ ಭಗವಾನ್ ದಾಸ , ರಾಜಾ ಮಾನಸಿಂಗ್., ರಾಜಾ ಸೂರ್ಜನ್ ಮಲ್ಲ, ರಾಜಾ ತೋಡರ ಮಲ್, ರಾಜಾ ಬಿರಬಲ್, ಸಂಗೀತ ಸಾಮ್ರಾಟ ತಾನ್ ಸೇನ್

111) ಧಾರ್ಮಿಕ ಸ್ವಾತಂತ್ರ್ಯ ;- ಅಕ್ಬರನು ಇಸ್ಲಾಮ್ ಧರ್ಮದವನಾಗಿದ್ದರೂ ಹಿಂದಿನ ಅರಸರಂತೆ ಧರ್ಮಾಂಧನಾಗಿರಲಿಲ್ಲ. ಭಾರತೀಯರಾದ ಹಿಂದೂಗಳ ಧಾರ್ಮಿಕ ಪದ್ದತಿ & ಸಾಂಸ್ಕೃತಿಯನ್ನು ಅರಿತು ಮೆಚ್ಚಿಕೊಂಡಿದ್ದನು. ಹಿಂದಿನ ಮುಸ್ಲೀಮ್ ಅರಸರು ನೀಡದೆಯೇ ಇರುವ ಧಾರ್ಮಿಕ ಸ್ವಾತಂತ್ರ್ಯವನ್ನು ಎಲ್ಲಾ ಹಿಂದೂಗಳಿಗೆ ನೀಡಿದನು ಸಾಮ್ರಾಜ್ಯ ದ ಎಲ್ಲಾ ಹಿಂದೂಗಳು ತಮ್ಮ ದೇವ –ದೇವತೆಗಳನ್ನು ಪೂಜಿಸಲೂ, ಹಬ್ಬ-ಹರಿದಿನಗಳನ್ನು ಆಚಾರಿಸಲೂ,ಸಂಪೂರ್ಣ ಸಾತಂತ್ರ್ಯ ನೀಡಿದನು. ಜಿಜಿಯಾ , ಯಾತ್ರಿಕರ ತೆರಿಗೆಯ ರದ್ದತಿ. ಬಲವಂತದ ಮತಾಂತರ, ದೇವಾಲಯಗಳ ನಾಶ ಇವೂಗಳನ್ನು ಕಾನೂನಿನ ಮುಖಾಂತರ ನಿಲ್ಲಿಸಿದನು.

IV) ಸೋತ ಮತ್ತು ಮೃತರಾದ ಅರಸರೊಂದಿಗೆ ಅನುಸರಿಸಿದ ರೀತಿ ;- ಅಕ್ಬರನು ತನ್ನೊಡನೆ ಯುದ್ಧ ಮಾಡಿ, ಸೋತ ಅರಸರೊಂದಿಗೆ, ಯುದ್ಧ ಮಾಡದಯೇ ಶರಣಾಗತರಾದ ಅರಸರೊಂದಿಗೆ ಮತ್ತು ರಣಭೂಮಿಯಲ್ಲಿ ಹೋರಾಡಿ ವೀರಸ್ವರ್ಗ ಸೇರಿದ ಮೃತ ಅರಸರೊಂದಿಗೆ ನಡೆದುಕೊಂಡ ರೀತಿಯು ಅವನ ರಜಪೂತ ನೀತಿಯಾಗಿದೆ. ಉದಾಹರಣೆಗೆ

1. ರಣಥಂಭೊರದ ರಾಜಾ ಸೂರ್ಜನರಾಯ ಯುದ್ಧದಲ್ಲಿ ಸೋತು ಸರೆಸಿಕ್ಕಾಗ, ಅವನನ್ನು ಕ್ಷಮಿಸಿ, ಮೊಗರ ಸೇವೆಯಲ್ಲಿ ಉನ್ನತ ಹುದ್ದೆ ನೀಡಿದ್ದು.
2. ಯುದ್ಧ ಮಾಡದಯೇ ಶರಣಾಗತನಾದ ಕಾಲಿಂಜರದ ರಾಜಾ ರಾಮಚಂದ್ರನಿಗೆ ಮೊಘಲರ ದರ್ಬಾರಲ್ಲಿ ಭವ್ಯವಾದ ಸ್ವಾಗತೀಸಿ, ಉನ್ನತವಾದ ಸ್ಥಾನ ನೀಡಿದ್ದು.
3. ಮೇವಾಡದ ರಣಭೂಮಿಯಲ್ಲಿ ತನ್ನಿಂದ ಹತರಾದ ಜಯಮಲ್ಲ ಮತ್ತು ಪಟ್ಟಾಸಿಂಗರ ಪ್ರತಿಮೆಗಳನ್ನು ಮಾಡಿಸಿ, ಅವರ ಸ್ವಾಮಿನಿಷ್ಠೆ ಮತ್ತು ಸ್ವಾತಂತ್ರ್ಯ ಪ್ರೀಯತೆಯನ್ನು ಹೋಗಳಿ, ಆಗ್ರಾದ ಪ್ರವೇಶ ದ್ವಾರಗಳಲ್ಲಿ ಮೂರ್ತಿಗಳನ್ನು ಸ್ಥಾಪಿಸಿದ್ದು

V.) ಕೇಲ ರಜಪೂತರೊಡನೆ ಆಕ್ರಮಣ ನೀತಿಯಲ್ಲಿ ಮೃದತ್ವ ;-ಅಕ್ಬರನು ತನ್ನ ಮಹಾತ್ವಕಾಂಕ್ಷೆಗೆ ವಿರೋಧಿಗಳಾದ ಮತ್ತು ತನ್ನ ಸಾರ್ವಭೌಮತ್ವಕ್ಕೆ ದಕ್ಕೆಯೊಡ್ಡಿದ ರಜಪೂತ ಅರಸರೊಂದಿಗೆ ಆಕ್ರಮಣ ನೀತಿಯಲ್ಲಿ ಮೃದತ್ವವನ್ನು ಅನುಸರಿಸಿದ್ದು ಅವನ ರಜಪೂತ ನೀತಿಯಲ್ಲಿಯೇ ವಿಶೇಷವಾಗಿದೆ.

ಉದಾಹರಣೆಗೆ , ಮೇವಾಡದ ರಾಣಾ ಉದಯಸಿಂಗ್ ಮತ್ತು ರಾಣಾ ಪ್ರತಾಪಸಿಂಗರೊಡನೆ ಪ್ರಾರಂಬದಲ್ಲಿ ಕಠಿಣ ನೀತಿ ಅನುಸರಿಸಿ ನಂತರದಲ್ಲಿ ಅವರ ಛಲ-ವೀರತ್ವ, ಸ್ವಾತಂತ್ರ್ಯ-ಪ್ರೀಯತೆ, ಸ್ವಾಭಿಮಾನ ಮೆಚ್ಚಿ ಆಕ್ರಮಣದಲ್ಲಿಯೂ ಮೃದತ್ವವನ್ನು ಅನುಸರಿಸಿದ್ದು ಗೋಚರವಾಗುತ್ತದೆ. ಈಡಿ ಭಾರತ ಅವನ ನಿಯಂತ್ರಣದಲ್ಲಿರೂ ಮೇವಾಡನ್ನು ಮಾತ್ರ ಸಂಪೂರ್ಣವಾಗಿ ಸ್ವಾಧೀನ ಪಡಿಸಿಕೊಳ್ಳಲಿಲ್ಲ.

VI.) ಪರಿಣಾಮಗಳು ಮತ್ತು ಮಹತ್ವ. ;- ಸಾಮ್ರಾಟ ಅಕ್ಬರನು ಅನುಸರಿಸಿದ ರಜಪೂತ ನೀತಿಯಿಂದ ಹೊಸ ಅದ್ಯಾಯನ ಪ್ರಾರಂಬಿಸಿದನು. ಇದರಿಂದ ಸಾಮ್ರಾಜ್ಯ ಆಡಳಿತದ ಮೇಲೆ ಮಹತ್ತರ ಪರಿಣಾಮಗಳು ಉಂಟಾದವು ಅವು ಈಕೆಳಗಿನಂತಿವೆ.

- ವಿಶಾಲವಾದ ಸಾಮ್ರಾಜ್ಯದ ಸ್ಥಾಪನೆ.
- ಶಕ್ತಿಸಾಲಿಯಾದ ಮತ್ತು ಬಲಾಢ್ಯವಾದ ಸೈನ್ಯದ ಸಂಘಟನೆ.
- ಸ್ವಾರ್ಥ- ಬ್ರಷ್ಟ ಅಧಿಕಾರಿಗಳ ನಿರ್ಮೂಲನೆ.
- ಕಂದಾಯದಲ್ಲಿ ಅದ್ಭುತವಾದ ಪ್ರಗತಿ.
- ಹೆಚ್ಚು ಆದಾಯ ಸಂಗ್ರಹಣೆಯಿಂದಾಗಿ, ಆರ್ಥಿಕ ಪ್ರಗತಿಯಾಗಿ, ವಿಶ್ವದಲ್ಲಿಯೇ ಅತ್ಯಂತ ಶ್ರೀಮಂತ ಸಾಮ್ರಾಜ್ಯವಾಗಿತ್ತು.
- ಈಡೀ ದೇಶದಲ್ಲಿಯೇ ಏಕರೂಪದ ಆಡಳಿತ, ನಾಣ್ಯ, ಕಾಯ್ದೆ-ಕಾನೂನು, ಅಳತೆ-ತೂಕ, ಶಾಂತಿ-ರಕ್ಷಣೆ,
- ಬಹುದಿನಗಳಿಂದ ಪರಸ್ಪರ ದ್ವೇಷಿಸುತ್ತಿದ್ದ ಹಿಂದೂ-ಮುಸ್ಲೀರ ಸಾಮರಸ್ಯ ಮತ್ತು ಸದ್ಭಾವನೆ
- ಪರಸ್ಪರ ಸಾಹಿತ್ಯದ ವಿನಿಮಯ ಅಂದರೆ ಸಂಸ್ಕೃತ ಭಾಷೆಯ ಗ್ರಂಥಗಳು ಅರಬ್ಬಿ ಮತ್ತು ಪರ್ಷಿಯನ್ ಭಾಷೆಗೆ ಅದರಂತೆ ಅರಬ್ಬಿಕ್ ಮತ್ತು ಪರ್ಷಿಯನ್ ಭಾಷೆಯ ಕೃತಿಗಳು ಸಂಸ್ಕೃತ, ಹಿಂದಿ ಭಾಷೆಗೂ ಭಾಷಾಂತರ ಅನುವಾದವಾಯಿತು.
- ವಾಸ್ತುಶಿಲ್ಪದಲ್ಲಿ ಸಾಮರಸ್ಯದಿಂದಾಗಿ ಇಂಡೋ-ಸಾರ್ಶನಿಕ್ ಶೈಲಿಯ ಉದಯ.
- ಸಂಗೀತದಲ್ಲಿಯ ಸಾಮರಸ್ಯದಿಂದಾಗಿ ಹೊಸ ರಾಗಗಳ ಮತ್ತು ವಾದ್ಯಗಳ ಪರಿಚಯ.
- ಬಾಷೆಗಳ ಸಾಮರಸ್ಯದಿಂದಾಗಿ ಉರ್ದು (ದಖನಿ) ಬಾಷೆಯ ಉದಯ.

**ಉಪಸಂವಾರ.** ಸಾಮ್ರಾಟ ಅಕ್ಬರನು ಅನುಸರಿಸಿದ ಜಾತ್ಯಾತೀತ ರಜಪೂತ ನೀತಿಯಿಂದ ಸಾಮಾಜಿಕ ಸ್ಥಿರತೆಗೆ ಹೊಸ ಅದ್ಯಾಯನ ಆರಂಬವಾಯಿತು. ಬಹುದಿನಗಳಿಂದ ಪರಸ್ಪರ ದ್ವೇಷಿಸುತ್ತಿದ್ದ ಹಿಂದೂ-ಮುಸ್ಲೀರು ಸಾಮರಸ್ಯ ಮತ್ತು ಸದ್ಭಾವನೆಯಿಂದ ನಡೆದುಕೊಂಡರು. ಇದರಿಂದ ಸಾಮ್ರಾಜ್ಯದ ಆದಾಯ ಹೆಚ್ಚು ಸಂಗ್ರಹಣೆಯಿಂದಾಗಿ, ಆರ್ಥಿಕ ಪ್ರಗತಿಯಾಗಿ, ವಿಶ್ವದಲ್ಲಿಯೇ ಅತ್ಯಂತ ಶ್ರೀಮಂತ ಸಾಮ್ರಾಜ್ಯವಾಗಿ ಹೊರಹೊಮ್ಮಿತು. ಅಕ್ಬರನು ದಿ ಗ್ರೇಟ್ ಎಂದು ತನ್ನ ಸಮಕಾಲಿನ ವಿಶ್ವದ ಶ್ರೇಷ್ಟ ಸಾಮ್ರಾಟರಲ್ಲಿ ಅಗ್ರಗಣ್ಯನಾಗಿ ಮರೆದಿದ್ದಾನೆ.